ಅಧಿನಿಯಮ 6, 1974) ಕರ್ನಾಟಕ ರಾಜ್ಯದಲ್ಲಿ 23ನೇ ಮಾರ್ಚ್ 1974 ರಿಂದ ಜಾರಿಗೆ ಬಂದಿರುತ್ತದೆ.

ಹಾಗೂ ಈ ಕಾರಣದಿಂದ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 44, 1978) ಇದನ್ನು ಸಹ ಕರ್ನಾಟಕ ರಾಜ್ಯ 13ನೇ ಫೆಬ್ರವರಿ 1982ರಲ್ಲಿ ಅಂಗೀಕರಿಸಿರುತ್ತದೆ.

ಹಾಗೂ ಮೇಲ್ಕಾಣಿಸಿದ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಹಾಗೂ ಕಾರ್ಯರೂಪದ ತೊಂದರೆಗಳ ಕಾರಣದಿಂದ ಸದರಿ ಅಧಿನಿಯಮಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡುವ ಅಗತ್ಯತೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತದೆ.

ಹಾಗೂ ಈ ಕಾರಣದಿಂದ, ಆದರಂತೆ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1988(ಕೇಂದ್ರ ಅಧಿನಿಯಮ 53, 1988)ವನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಯಿತು ಹಾಗೂ ಸಂವಿಧಾನದ 252(1) ಹಾಗೂ (2)ನೇ ಅನುಚ್ಛೇಧದ ಮೇರೆಗೆ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ತಿದ್ದುಪಡಿ ಅಧಿನಿಯಮವನ್ನು ಅಂಗೀಕರಿಸಬೇಕೆಂದು ಭಾರತ ಸರ್ಕಾರ ರಾಜ್ಯ ಸರ್ಕಾರವನ್ನು ಕೋರಿರುತ್ತದೆ.

ಈಗ ಆದುದರಿಂದ ಸಂವಿಧಾನವು 252ನೇ ಅನುಚ್ಛೇಧದ ಖಂಡಿಕೆ (2)ನ್ನು ಸೇರಿಸಿ ಓದಿಕೊಂಡಂತೆ ಸದರಿ ಅನುಚ್ಛೇಧ ಖಂಡಿಕೆ (1)ನ್ನು ಅನುಸರಿಸಿ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 1988(ಕೇಂದ್ರ ಆದಿನಿಯಮ 53,1988)ವನ್ನು ಕರ್ನಾಟಕ ರಾಜ್ಯ ಅಂಗೀಕರಿಸಬೇಕೆಂದು ಈ ವಿಧಾನ ಸಭೆಯು ಈ ಮೂಲಕ ನಿರ್ಣಯಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಶಾಸನಾತ್ಮಕ ನಿರ್ಣಯಕ್ಕೆ ಸಭೆಯ ಅನುಮೋದನೆ ದೊರಕಿತು.

ಶಾಸನ ರಚನಾ ಕಾರ್ಯಕಲಾಪಗಳು

1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು) : ಮಾನ್ಯ ಅಧ್ಯಕ್ಷರೆ, 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾಪವನ್ನು ಮಂಡಿಸಲಾಯಿತು.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿಯ ಮಂಡಲ ವಿಧೇಯಕ 1991ನ್ನು ಹೃತ್ಪೂರ್ವಕರಾಗಿ ಸ್ವಾಗತಿಸುತ್ತೇನೆ. ಶ್ರೀಮತಿ ಮೋಟಮ್ಮನವರು ಅವರ ಜಾಗಕ್ಕೆ ಹೋಗಿ ಕುಳಿತುಕೊಂಡರೆ, ಮಲೆನಾಡು ಅಭಿವೃದ್ಧಿ ಬಗ್ಗೆ ನಾಲ್ಕು ಮಾತು

ಹೇಳಬಹುದು. ಏತಕ್ಕೆಂದರೆ ಮಲೆನಾಡಿನವರಾಗಿ ನನ್ನ ಕಣ್ಣಿಗೆ ಕಾಣಿಸುತ್ತಿರುವವರು ಅವರು ಒಬ್ಬರೇ.

ಶ್ರೀ ವಾಟಾಳ್ ನಾಗರಾಜ್ : ನೀವೆಲ್ಲಾ ಮಲೆನಾಡಿನವರು ಒಂದಾಗಿ ಬಿಟ್ಟರೆ ಈ ರಾಜ್ಯದ ಗತಿ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಕುಡಿಯುವುದು ಮಲೆನಾಡಿನ ನೀರು, ಬೆಳಗ್ಗೆ ಉಪಯೋಗಿಸತಕ್ಕಂಥ ನೀರು ಮಲೆನಾಡಿನದು, ಈಗ ಅವರು ನೀವೆಲ್ಲಾ ಒಟ್ಟಾಗಿದ್ದೀರೆಂದು ಹೇಳುತ್ತೀದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಈ ಬಿಲ್ಲಿನಲ್ಲೂ ನಾವು ಹಿಂದುಳಿದಿದ್ದೇವೆ; ಮೊದಲು ಹೈದರಾಬಾದ್ ಕರ್ನಾಟಕ ಬರಬೇಕಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಲಿ ಎಂಬುದು ಹೊಸದೇನೂ ಅಲ್. ಈ ಹಿಂದೆಯೇ ಈ ಅಭಿವೃದ್ಧಿ ಮಂಡಲಿ ಎಂದು ಇತ್ತು. ಮಾನ್ಯ ಬದರಿನಾರಾಯಣ ಐಯಂಗಾರ್‌ರವರು ಇದರ ಅಧ್ಯಕ್ಷರಾಗಿದ್ದರು. ಇದರ ಉದ್ದೇಶವಾಗಲೀ ಅಥವಾ, ಇದರ ಹಿಂದೆ ಇರತಕ್ಕ ಚಿಂತನೆಯಾಗಲಿ ಹೊಸದೇನೂ ಅಲ್ಲ. ವಾಟಾಳ್ ನಾಗರಾಜ್‌ರವರೆ, ಹಿಂದೆ ನಿಮ್ಮ ಕಾಲದಲ್ಲಿ ಮಾನ್ಯ ಬದರೀನಾರಾಯಣ ಐಯಂಗಾರವರ ಅಧ್ಯಕ್ಷತೆಯಲ್ಲಿ ಒಂದು ಮಂಡಳಿ ಇತ್ತು.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ಮಾತನ್ನು ಹೇಳುತ್ತೇನೆ. ತಮ್ಮನ್ನು ನಾನು ವಿರೋಧ ಮಾಡುತ್ತಿಲ್ಲ. ಇದನ್ನು ಮಾಡುವಾಗ ಪ್ರಾಮಾಣಿಕತೆ ಇರಲಿ...

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ಈ ಮಲೆನಾಡಿನ ಪ್ರದೇಶ ತಮ್ಮ ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ಹೇಳಿರುವಂತೆ ಒಂದು ವಿಲಕ್ಷಣ ಪ್ರದೇಶ. ಅದರ ಸ್ವರೂಪ, ಭೌಗೋಳಿಕವಾದಂತಹ ಇರುವಿಕೆ ಮತ್ತು ವಿಸ್ತಾರವಾದಂತಹ ಪ್ರದೇಶತಗಳು, ಇವೆಲ್ಲಕ್ಕಿಂತ ಹೆಚ್ಚಾಗಿ ಚದುರಿಹೋಗಿರತಕ್ಕ ಜನಸಂಖ್ಯೆ, ಸದಾ ಹಚ್ಚುಹಸಿರಿನಿಂದ ಕಾಣತಕ್ಕಂಥ ನಿತ್ಯ ಹರಿದ್ವರ್ಣ ಕಾಡುಗಳು ತುಂಬಿ ಹರಿಯತಕ್ಕ ನದಿಗಳು ಮತ್ತು ತನ್ನದೇ ಆದಂಥ ವಿಶಿಷ್ಟವಾದಂತಹ ಸಂಸ್ಕೃತಿ ಹಾಗೂ ಸಂಸ್ಕಾರಗಳ ಹಿಂದೆ ಇರತಕ್ಕ ಪ್ರದೇಶ. ಈ ಪ್ರದೇಶ ಈ ನಾಡಿನ ಸಂಸ್ಕೃತಿಗಾಗಿ, ನಾಡಿನ ಕನ್ನಡದ ಅಭಿವೃದ್ಧಿಗಾಗಿ ಅನೇಕ ಮಹನೀಯರನ್ನು ಕೊಡುಗೆಯಾಗಿ ಕೊಟ್ಟಿದೆ. ಇಂದು ಬದುಕಿರತಕ್ಕ ರಾಷ್ಟ್ರ ಕವಿ ಕುವೆಂಪುರವರೂ ಕೂಡ ಆ ಚಿಂತನೆಯಲ್ಲಿಯೇ ಮೂಡಿ ಬಂದಂಥಹ ಮಹಾನ್ ವ್ಯಕ್ತಿ. ಆದರೆ ಈ ಆದರ್ಶಗಳನ್ನು ಅವರು ಈ ನಾಡಿಗೆ ಕೊಟ್ಟಂಥ ಸಂಸ್ಕೃತಿ ಮತ್ತು ವಿಚಾರಧಾರೆ, ಅಲ್ಲಿಯ ಪರಿಸರದಿಂದ ಮೂಡಿ ಬಂದಂಥ ವಿಚಾರಧಾರೆಗಳು, ಆದರೆ ಈವತ್ತು ಆ ಪರಿಸರದ ಅಥವಾ ಈ ಮಲೆನಾಡನ್ನು ಯಾರಾದರೂ ವಿವರಣೆ ಮಾಡಿದರೆ ಮಾನ್ಯ ಪುಟ್ಟಪ್ಪನವರ ಮಲೆನಾಡಿನ ಮಧುಮಗಳು ಎಂಬ ಪುಸ್ತಕವನ್ನು ಓದಬೇಕು ಅಷ್ಟೆ. ಅದರಲ್ಲಿ ಬರತಕ್ಕ ವಿವರಣೆಗಳು ಇವತ್ತು ಯಾವುದೂ ಕೂಡ ಪ್ರತ್ಯಕ್ಷವಾಗಿ ಉಳಿದಿಲ್ಲ. ಮುಂದಿನ ಪೀಳಿಗೆ ಆ ಪುಸ್ತಕವನ್ನೇನಾದರೂ ಓದಿದರೆ, ಇದೆಲ್ಲಾ ಕಲ್ಪನೆ ಏನೋ ಅನ್ನುವಂತಿದೆ. ಕಟ್ಟಕಡೆಗೆ ಅಲ್ಲಿ ಇದ್ದ ಜಿಗಣೆಗಳೂ ಕೂಡ ಉಳಿದಿಲ್ಲ. ಅಷ್ಟರಮಟ್ಟಿಗೆ ನಾವು ಅಲ್ಲಿ ಅಭಿವೃದ್ಧಿಯನ್ನು ಮಾಡಿದ್ದೇವೆ. ಆದರೆ ಅಷ್ಟೇ ವಿಶಿಷ್ಟವಾದ ಪ್ರಕೃತಿ ಎಷ್ಟು ವರವನ್ನು ಕೊಟ್ಟಿದ್ದಾಳೋ ಅಷ್ಟೇ ಮಲೆನಾಡಿನ

ಜನರಿಗೆ ಶಾಪವಾಗಿ ಪರಿಣಮಿಸಿದೆ. 1961ನೇ ಇಸವಿಯಲ್ಲಿ ಮೂಡಿಗೆರೆಯ ಒಂದು ಪ್ರದೇಶದಲ್ಲಿ ಒಂದೇ ಒಂದು ದಿವಸದಲ್ಲಿ 28 ಅಂಗುಲ ಮಳೆ ಬಂದಿತ್ತು. ನನ್ನ ತೀರ್ಥಹಳ್ಳಿ ತಾಲ್ಲೂಕು ದಕ್ಷಿಣ ಭಾರತದ ಚಿರಾಪುಂಜಿ ಎಂದೇ ಹೆಸರಾಗಿರತಕ್ಕ ಪ್ರದೇಶ ಇದು. ಇಲ್ಲಿ ವರ್ಷಕ್ಕೆ ಸುಮಾರು 300-350 ಅಂಗುಲ ಮಳೆ ಬರುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಕಾಫಿ, ಏಲಕ್ಕಿ, ಮೆಣಸು ವಿದೇಶಿ ವಿನಿಮಯವನ್ನು ಗಳಿಸತಕ್ಕ ಈ ಎಲ್ಲಾ ಸಾಂಬಾರ ಪದಾರ್ಥಗಳನ್ನೂ ಬೆಳೆಯುತ್ತಾರೆ. ಸುಮಾರು 200 ಕೋಟಿ ರೂ.ನಷ್ಟು ವಿದೇಶಿ ವಿನಿಮಯವನ್ನು ಕೇವಲ ಕಾಫಿ ಒಂದೇ ಒಂದು ಈ ರಾಷ್ಟ್ರಕ್ಕೆ ಗಳಿಸಿಕೊಡುತ್ತದೆ. ಈ ರಾಷ್ಟ್ರಕ್ಕೆ ಬೇಕಾದಂಥ ಶ್ರೀಗಂಧ, ತೇಗು, ಹಲಸು. ಮಾವು, ಇಂಥ ಅನೇಕ ದೊಡ್ಡ ದೊಡ್ಡ ಮರಗಳನ್ನು ಪ್ರಕೃತಿ ನಮಗೆ ಒದಗಿಸಿಕೊಟ್ಟಿದೆ. ಆದರೆ ಇಷ್ಟೆಲ್ಲವನ್ನೂ ನಮಗೆ ಒದಗಿಸಿಕೊಟ್ಟಿದ್ದರೂ ಅಲ್ಲಿ ಕನಿಷ್ಠವಾಗಿ ಬೇಕಾದಂಥ ಅವಶ್ಯಕತೆಗಳಿಲ್ಲ. ಆ ಕನಿಷ್ಠ ಅವಶ್ಯಕತೆಗಳು ಏನು? ಇಷ್ಟು ದೊಡ್ಡ ಪ್ರಮಾಣದ ನದಿಗಳಿವೆ, ಅವುಗಳಿಗೆ ಸಣ್ಣಪುಟ್ಟ ಸೇತುವೆಗಳನ್ನು ಮಾಡಿಸತಕ್ಕ ವ್ಯವಸ್ಥೆ ಕೂಡ ಆಗಿಲ್ಲ. ರಸ್ತೆಗಳ ಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಈ ಸಾರಿಯ ವಿಶೇಷವಾದ ಮಳೆಯ ಕಾರಣ ಸೇತುವೆಗಳೆಲ್ಲಾ ಕುಸಿದಿದೆ. ಅಲ್ಲಿ ಓಡಾಡುವುದಕ್ಕೆ ಆಗದ ರೀತಿಯಲ್ಲಿ ಯೋಗ್ಯತೆಯನ್ನು ಕಳೆದುಕೊಂಡಿರತಕ್ಕ ಚಿಂತಾಜನಕ ಸ್ಥಿತಿಯಲ್ಲಿ ರಸ್ತೆಗಳಿವೆ. ನಿತ್ಯ ಹರಿದ್ವರ್ಣ ಕಾಡುಗಳು ಎಂದು ಹೇಳಿ ಪುಸ್ತಕದಲ್ಲಿ ಓದುವುದಕ್ಕೆ ಅಷ್ಟೇ ಉಳಿದಿವೆ. ಆದುದರಿಂದ ಇದರ ಅಭಿವೃದ್ಧಿ ಮುಖ್ಯವಾಗಿ ಅಲ್ಲಿ ವಾಸಮಾಡತಕ್ಕ ಜನರಿಗೆ, ನಿತ್ಯ ಉಪಯೋಗಕ್ಕೆ ಬೇಕಾಗಿರತಕ್ಕಂಥ ಶಾಲೆಗಳು, ನಿತ್ಯ ಉಪಯೋಗಕ್ಕೆ ಬೇಕಾದಂಥ ರಸ್ತೆಗಳು ಆಗಬೇಕು. ಬಹುಶಃ ಇಲ್ಲಿರತಕ್ಕ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತಿಲ್ಲ. ಏಕೆಂದರೆ, ಇವರು ಪೇಟೆಯಲ್ಲಿ ಇದ್ದು ಓದಿದವರು. ನಾವು 6-6 ಮೈಲ್ ನಡೆದುಕೊಂಡು ಹೋಗಿ, ನಡೆದುಕೊಂಡು ಬಂದು ವಿದ್ಯಾಭ್ಯಾಸವನ್ನು ಮಾಡಿದ್ದವರು. ಜಿಗಣೆಯ ಕೈಯಲ್ಲಿ ಕಚ್ಚಿಸಿಕೊಂಡಿದ್ದವರು. ಅಲ್ಲಿಯ ಅಭಿವೃದ್ಧಿಗೆ ಸರ್ಕಾರ ಏನಾದರೂ ಯೋಜನೆ ಮಾಡಿದೆ ಎಂದರೆ ಸಂತೋಷದಿಂದ ಅದನ್ನು ಸ್ವಾಗತಮಾಡೋಣ. ಆದರೆ ಇದಕ್ಕೆ ಬೇರೆ ಇನ್ನೇನಾದರೂ ಕಾರಣವನ್ನು ಕೊಡಬೇಡಿ. ನಾವು ಇವರಿಗೆ ನೀರಾವರಿಯನ್ನುಮಾಡಿಕೊಡಬೇಕು. ಅದಕ್ಕಾಗಿ ನಾವು ಇವರಿಗೆ ಅಣೆಕಟ್ಟು ಕಟ್ಟಬೇಕು, ಸಾವಿರಾರು ಕರೆ ಇದಕ್ಕಾಗಿ ಮುಳುಗಡೆಯಾಗುತ್ತದೆ.

5.40 ಪಿ.ಎಂ.

ಇಲ್ಲಿಗೆ ಬರತಕ್ಕಂಥ ವಿದ್ಯುಚ್ಛಕ್ತಿ ಲಕ್ಷಾಂತರ ಎಕರೆ ಮಲೆನಾಡಿನ ಪ್ರದೇಶ ಮುಳುಗಿಸಿ ನಿಮಗೆ ಬೆಳಕು ಕೊಟ್ಟು ನಾವು ಕತ್ತಲೆಯಲ್ಲಿದ್ದೇವೆ. ಬೆಂಗಳೂರಿಗೆ ಬರತಕ್ಕಂಥದ್ದು ಶಿಂಷಾದ್ದು ಎಲ್ಲೋ ಸ್ವಲ್ಪಭಾಗ. ಬೆಂಕಿಪೆಟ್ಟಿಗೆ ಪಟ್ಟಣ ಅದು. ಆ ಕಾರಣ ವರಾಹಿ, ಚಕ್ರ, ಸಾವೆಹೊಕ್ಕಲು..

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವೆಲ್ಲಾ ಬಯಲು ಸೀಮೆಯವರು ಅದು ಸರಿ. ಈಗ ನಮ್ಮ ವಿರೋಧಪಕ್ಷದ ನಾಯಕರು. ಈ ಮಲೆನಾಡು ಅಭಿವೃದ್ಧಿ ಮಸೂದೆಯನ್ನು ಮಂಡನೆ ಮಾಡಿದಾಗ ಅದನ್ನು ಸ್ವಾಗತಮಾಡಿದರು. ಇವರು ಅವರು ಎಲ್ಲಾ ಸೇರಿಕೊಂಡೇ ಮಾಡುತ್ತಿರುವುದು. ಈಗ ನಮಗೆ ಏನಾಗಿದೆ ಎಂದರೆ ಈ ಸಭಾ ನಾಯಕರು ಶಿವಮೊಗ್ಗದವರು, ವಿರೋಧಪಕ್ಷದ ನಾಯಕರೂ ಶಿವಮೊಗ್ಗದವರು, ಆ ಬಿ.ಜೆ.ಪಿ. ನಾಯಕರೂ ಶಿವಮೊಗ್ಗದವರು. ಇವರೆಲ್ಲಾ ಶಿವಮೊಗ್ಗದವರೇ. ಮಾಡಲಿ. ನಮಗೆ ಸಂತೋಷ.

ನಮ್ಮದೇನೂ ತಕರಾರು ಇಲ್ಲ, ನಾವು ಸ್ವಾಗತ ಮಾಡುತ್ತೇವೆ. ನಮಗೆ ಸಂತೋಷವೇ. ಆದರೆ ಇವರು ಹೇಳುತ್ತಿದ್ದಾರೆ, 6 ಮೈಲಿ ನಡೆದು ಹೈಸ್ಕೂಲು ಓದಿದೆ ಎಂದು ಹೇಳಿ. ಮಾನ್ಯ ಉಪಾಧ್ಯಕ್ಷಿಣಿಯವರೇ, ನಿಮಗೆ ನಾನು ಹೇಳಬೇಕೆಂದರೆ, ಮಾನ್ಯ ಜಾಲಪ್ಪನವರು ಇಲ್ಲೇ ಇದ್ದಾರೆ. ಅವರ ತಾಲ್ಲೂಕು ಎರಡು ಸೇರಿಸಿದರೂ ಇವರ ತಾಲ್ಲೂಕಿನಲ್ಲಿರುವಷ್ಟು ಹೈಸ್ಕೂಲುಗಳಿಲ್ಲ. 1984ನೇ ಇಸವಿಯವರೆಗೂ ನನ್ನ ತಾಲ್ಲೂಕಿನಲ್ಲಿ ಎರಡೇ ಎರಡು ಹೈಸ್ಕೂಲುಗಳಿದ್ದುದ್ದು.

ಶ್ರೀ ಡಿ.ಬಿ. ಚಂದ್ರೇಗೌಡ : ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಎರಡೇ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಓದುವ ಕಾಲಕ್ಕೆ ಇಡೀ ತಾಲ್ಲೂಕಿನಲ್ಲಿ ಒಂದೇ ಹೈಸ್ಕೂಲು ಇತ್ತು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಒಂದು ತನಿಖಾ ಆಯೋಗ ರಚನೆ ಮಾಡಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಓದುವ ಕಾಲಕ್ಕೆ ಒಂದೇ ಒಂದು ಶಾಲೆ ಇದ್ದುದು. ನಾನು ಹೇಳುತ್ತಿದ್ದುದು ಏನೆಂದರೆ ವರಾಹಿಯಿಂದ, ಚಕ್ರಾದಿಂದ, ಸಾವೆ ಹಕ್ಕಿನಿಂದ, ಲಿಂಗನಮಕ್ಕಿ ಇಂಥ ಅನೇಕ ಮುಳುಗಡೆ ಪ್ರದೇಶಗಳಲ್ಲಿ ಒಂದೊಂದು ಎಕರೆಗೆ ಒಂದೊಂದು ಮನೆ ಇತ್ತು. ಆದರ ಉದ್ದೇಶವೇನೆಂದರೆ ಅವೆಲ್ಲಾ ಮುಳಗಿಸಿಬಿಟ್ಟೆ ನಿಮಗೆ ಬೆಳಕನ್ನು ಕೊಡುತ್ತಿದ್ದೇವೆ. ಆದರೆ ನಿಮ್ಮಿಂದ ನಾವು ನಿರೀಕ್ಷೆ ಮಾಡುತ್ತೇವೆ. ಕನಿಷ್ಠ ಬದುಕುವುದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಿ. ಬಾಕಿ ಇದ್ದುದು ಕಷ್ಟಪಟ್ಟುಕೊಂಡು ನಾವು ಮಾಡಿಕೊಳ್ಳುತ್ತೇವೆ. ಶ್ರೀಮಾನ್ ಹುಚ್ಚಮಾಸ್ತಿ ಗೌಡರಿಗೆ, ಮಲೆನಾಡಿನ ಸಂಬಂಧವಾಗುವ ವರೆಗೆ ಅವರಿಗೆ ಅಲ್ಲಿನ ಸ್ಥಿತಿಗತಿ ಗೊತ್ತಿರಲಿಲ್ಲ. ಕಾಫಿ ಪ್ಲಾಂಟರುಗಳೆಂದರೆ ಭಾರಿ ಶ್ರೀಮಂತರೆಂದು ತಿಳಿದುಕೊಂಡಿದ್ದರು. ಆದಾದಮೇಲೆ ಶಾಸನ ರಚನೆ ಮಾಡುವ ಕಾಲಕ್ಕೆ ಸಧ್ಯ ಅವರಿಗೆ ಅನುಭವ ಬಂದುತ್ತು. ನಮ್ಮ ಹೆಣ್ಣುಮಗಳು ಅವರಿಗೆ ಸ್ವಲ್ಪ ಬುದ್ಧಿ ಅಲ್ಲಿಯ ಪರಿಸರವನ್ನು ತಿಳಿಸಿಕೊಟ್ಟಕಾರಣ ಅವರು ಸ್ವಲ್ಪ ಇದರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದಾರೆ.

ಸುಮಾರು 40 ತಾಲ್ಲೂಕುಗಳನ್ನು ಇದರ ವ್ಯಾಪ್ತಿಯಲ್ಲಿ ತರಲು ಪ್ರಯತ್ನ ಮಾಡಿದ್ದೀರಿ.

ಶ್ರೀ ಎಂ.ವಿ. ವೆಂಕಟಪ್ಪ : ಉತ್ತರ ಕನ್ನಡ ಜಿಲ್ಲೆಯಲ್ಲಿ 11 ತಾಲ್ಲೂಕುಗಳಲ್ಲಿ, ನನಗೆ ಗೊತ್ತಿರುವ ಮಟ್ಟಿಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಉತ್ತರಕನ್ನಡದಲ್ಲಿ 11ತಾಲ್ಲೂಕುಗಳಿವೆ. 11 ತಾಲ್ಲೂಕುಗಳು ಉತ್ತರ ಕನ್ನಡದಲ್ಲಿದ್ದರೂ 6 ಅಸೆಂಬ್ಲಿ ಕಾನ್‌ಸ್ಟಿಯನ್ಸಿ. ನಮ್ಮ ಪರಿಸ್ಥಿತಿ ನೋಡಿ. ಶೃಂಗೇರಿಯಲ್ಲಿ ಮೂರು ತಾಲ್ಲೂಕುಗಳು ಒಂದು ಅಸೆಂಬ್ಲಿ ಕಾನ್‌ಸ್ಟಿಟ್ಯುಯೆನ್ಸಿ ಆದರೆ ಕಡೂರು ಮತ್ತು ಬೀರೂರೂ ಒಂದು ತಾಲ್ಲೂಕು ಎರಡು ಅಸೆಂಬ್ಲಿ ಕಾನ್‌ಸ್ಟಿಟ್ಯೂಯೆನ್ಸಿ. ಈಗ ಅಸೆಂಬ್ಲಿ ಕಾನ್‌ಸ್ಟಿಯನ್ಸಿಗೆ 2 ತಾಲ್ಲೂಕು ಸೇರುತ್ತದೆ. ಹೊಸನಗರದ ಒಂದು ಭಾಗ. ಮತ್ತು ತೀರ್ಥಹಳ್ಳಿ ತಾಲ್ಲೂಕು. ಈ ವೈವಿಧ್ಯತೆಯಲ್ಲಿ ಮಲೆನಾಡಿನಲ್ಲಿರತಕ್ಕಂಥ ಏಕತೆ, ಸ್ವರೂಪದಲ್ಲಿ ಸಮಸ್ಯೆಯಲ್ಲಿ ಮತ್ತು ನಾವು ಸಿಕ್ಕಿರತಕ್ಕಂಥ ಒಂದು ಸ್ಥಿತಿಯಲ್ಲಿ ಏಕತೆ ಇದೆ. ಆ ಕಾರಣ ಇದರ

ಅತ್ಯಂತ ಅವಶ್ಯಕತೆ ಇತ್ತು 40 ತಾಲ್ಲೂಕನ್ನು ಇದರ ವ್ಯಾಪ್ತಿಯಲ್ಲಿ ತಂದಿದ್ದೇವೆ. ಮಾನ್ಯ ಲಕ್ಷ್ಮಣಯ್ಯನವರು ಈಗ ಬಂದಿದ್ದಾರೆ. ಮಾನ್ಯ ಲಕ್ಷ್ಮಣಯ್ಯನವರೇ, ಈ ಮಸೂದೆಯನ್ನು ಸ್ವಲ್ಪ ನೋಡಿ. ಏತಕ್ಕೆಂದರೆ ನಿಮ್ಮ ಬೇಲೂರು ತಾಲ್ಲೂಕು ಇದರಲ್ಲಿಲ್ಲ. ಗೊತ್ತಾಯಿತೇ? ಇಲ್ಲಿ ಯಾವ ತಾಲ್ಲೂಕು ಸೇರಬಾರದೋ ಅದು ಸೇರಿದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಸ್ವಾಮಿ, ಈ ಬಿಲ್ ತಯಾರು ಮಾಡಿದವರಿಗೆ ಮಲೆನಾಡು ಯಾವುದು, ಮೈದಾನ ಯಾವುದು ಎನ್ನುವ ವಿಚಾರವೇ ಗೊತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುವತನಕ ನಿಮಗೆ ಗೊತ್ತಿರಲಿಲ್ಲವಲ್ಲಾ.

ಶ್ರೀ ಕೆ.ಹೆಚ್. ಹನುಮೇಗೌಡ : ನಾವು ನೋಡಿ ಮರೆತುಬಿಟ್ಟಿದ್ದೇವೆ. ಅದು ಸೇರಿಸುವವರೆಗೂ ನಾವು ಪ್ರಯತ್ನ ಮಾಡುತ್ತೇವೆ. ದಯವಿಟ್ಟು ನೀವು ಸೇರಿಸಿ ಎಂದು ಒಂದು ಮಾತು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ಈ ವ್ಯಾಪ್ತಿಯನ್ನು ಮಸೂದೆಯಲ್ಲಿ ಹೇಳುವಾಗ, ಮಲೆನಾಡು ಪ್ರದೇಶವೆಂದರೆ ಈ ಅಧಿನಿವೇಶನ ಅನುಬಂಧಿಸಲಾದ ಸೂಚನೆಯಲ್ಲಿ ವಿದ್ಯುಕ್ತಪಡಿಸಲಾದ ಪ್ರದೇಶಗಳೆಂದು ಹೇಳಿದೆ. ಆದರೆ ಇನ್ನೊಂದು ಮಸೂದೆಯಲ್ಲಿ ಜಿಲ್ಲೆಗಳನ್ನು ವಿಂಗಡಣೆ ಮಾಡಿ ಹೇಳಿದ್ದೀರಿ.

ಇಲ್ಲಿ ತಾಲ್ಲೂಕುಗಳನ್ನು ವಿಂಗಡಣೆ ಮಾಡಿರುವುದು ಸರಿ. ಆದರೆ ಇದಕ್ಕೆ ಬೇಕಾದ ಮಸೂದೆ ಏನೋ ಆಯಿತು. ಮಸೂದೆ ಏನೋ ಆಗಿದೆ. ಹಸು ಕಟ್ಟಿದ್ದೀವಿ ಎಂದು ಸಂತೋಷ ಆದರೆ ಅದು ಹಾಲು ಕೊಡಬೇಕಲ್ಲಾ. ಅದಕ್ಕೆ ಗರ್ಭಧಾರಣೆ ಆಗಿದೆಯೋ ಅಥವಾ ಸುಮ್ಮನೆ ಹಸು ಕಟ್ಟಿದ್ದೇವೆಂದು ಸಂತೋಷವೋ, ಗೊಡ್ಡು ಹಸುವನ್ನು ಕಟ್ಟಿಕೊಂಡು ನಾವು ಏನು ಮಾಡುವುದು? ಅದಕ್ಕೆ ಹಣ ಕಾಸು ಒದಗಿಸಿದ್ದೀರಾ? ಎಷ್ಟು ಒದಗಿಸಿದ್ದೀರಿ? ಯಾವ ಯಾವ ರೂಪದಲ್ಲಿ ಒದಗಿಸಿದ್ದೀರಿ? ಆಡಳಿತಾತ್ಮಕವಾದಂಥ ವ್ಯವಸ್ಥೆ ಮಾಡುವಾಗ ಜಿಲ್ಲಾ ಪರಿಷತ್ತು ಬರುತ್ತದೆ. ಸರ್ಕಾರ ಬರುತ್ತದೆ, ಬೇರೆ ಬೇರೆ ವಿವಿಧ ಇಲಾಖೆಗಳು ಬರುತ್ತವೆ ಇದರಲ್ಲಿ, ಆದುದರಿಂದ ಇದನ್ನು ಸಮನ್ವಯ ಮಾಡಬೇಕು. ಒಟ್ಟಾರೆ ಮಲೆನಾಡಿನ ಅಭಿವೃದ್ಧಿ ಆಗುವುದಕ್ಕೆ ತಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳನ್ನು ಹೇಳಬೇಕೆಂದು ಮಂತ್ರಿಮಂಡಲದ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರನ್ನು ಪ್ರಾರ್ಥಿಸುತ್ತೇನೆ. ನಮಗೆ ಈ ಸಂತೋಷವನ್ನು ಹಂಚಿಕೊಳ್ಳುವುದಕ್ಕಾಗಿ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ಹೀಗೆ ಅಭಿನಂದನೆ ಮಾಡುವಾಗ ನೀವು ನಮ್ಮ ಮಲೆನಾಡಿನ ಭಾಗದಲ್ಲಿ ಬಂದಿದ್ದೀರಿ. ಆದುದರಿಂದ ಈ ಮಸೂದೆಗೆ ಮತ್ತಷ್ಟು ಶಕ್ತಿ ತುಂಬುತ್ತೀರೆಂಬ ವಿಶ್ವಾಸದೊಂದಿಗೆ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ಈಗ ಎರಡು ಮಸೂದೆಗಳೂ ನಮ್ಮ ಎದುರಿಗೆ ಇವೆ. ಒಂದು ಮಲೆನಾಡು ಅಭಿವೃದ್ಧಿ ಮಂಡಲಿ, ಇನ್ನೊಂದು...

ಶ್ರೀ ಬಿ.ಹೆಚ್. ಯಂಕಾನಾಯಕ್ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಅನ್ನುವಷ್ಟರಲ್ಲಿ ಏತಕ್ಕೆ ನಗುತ್ತಾರೆ ಜಾಲಪ್ಪನವರು?

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಮಲೆನಾಡು ಇನ್ನೊಂದು ಬಯಲುನಾಡು ಎಂದು.

ಶ್ರೀ ಆರ್.ಎಲ್. ಜಾಲಪ್ಪ : ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಮಾಡುವುದಕ್ಕೆ ಎರಡನೆಯ ಮಾತಿಲ್ಲ, ಅದನ್ನು ನಾನು ಸ್ವಾಗತಿಸುತ್ತೇನೆ. ಕೆಲವರು 2-3 ತಾಲ್ಲೂಕುಗಳನ್ನು ಸೇರಿಸಲಿಲ್ಲವೆಂದು ಗಲಾಟೆ ಮಾಡಿದ್ದಾರೆ. ಅವನ್ನು ಸೇರಿಸಿ ಬೇಡ ಅನ್ನುವುದಿಲ್ಲ. ಆದರೆ ಈಗ ನಾವೆಲ್ಲಿದ್ದೇವೆ? ಒಂದು ಕಡೆ ಮಲೆನಾಡು ಅಭಿವೃದ್ಧಿ ಮಂಡಲಿ, ಇನ್ನೊಂದು ಕಡೆ ಹೈದರಾಬಾದ್ ಅಭಿವೃದ್ಧಿ ಮಂಡಲಿ, ಇನ್ನು ನಮ್ಮ ಅಭಿವೃದ್ಧಿಯನ್ನು ನೋಡಿಕೊಳ್ಳುವವರು ಯಾರು ಎಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್ : ನೀವು ಅಭಿವೃದ್ಧಿ ಆಗಿದ್ದೀರೆಂಬ ಭಾವನೆ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ಅಭಿವೃದ್ಧಿ ಹೇಗಿದೆ ಎಂದರೆ ಕರ್ನಾಟಕ ಆಗಿದ್ದೇ ಶಾಪ ಎಂಬ ಅಭಿಪ್ರಾಯಕ್ಕೆ ಬರುತ್ತಿದ್ದಾರೆ ಜನರು ನಮ್ಮ ಕಡೆ. ಒಂದು ಕೆರೆ ಇಲ್ಲ, ಕುಂಟೆ ಇಲ್ಲ, ಕಾಲುವೆ ಇಲ್ಲ. ಬದುಕುವುದು ಹೇಗೆ ಎಂದು ನನಗೆ ಅರ್ಥವಾಗಲಿಲ್ಲ. ನೀವು ಬೇರೆ ಯಾವ ಅಭಿವೃದ್ಧಿ ಮಂಡಲಿಯನ್ನು ಬೇಕಾದರೂ ಮಾಡಿಕೊಳ್ಳಿ, ನನ್ನ ತಕರಾರು ಇಲ್ಲ. ಆದರೆ ದಯವಿಟ್ಟು ಇದನ್ನು ಮಾಡುವಾಗ ನಮ್ಮ ಮೈದಾನ ಜಿಲ್ಲೆಗಳು ಏನಿವೆ ಅವಕ್ಕೆ ಸ್ವಲ್ಪ ಗಮನ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಜಿಲ್ಲೆ ಜಿಲ್ಲೆಗೆ ವ್ಯತ್ಯಾಸವಾಗಿ ಕಡೆಗೆ ನಮ್ಮದ್ದೇ ಬೇರೆ ಮಂಡಲಿ ಮಾಡಿ ಎಂಬ ಕಾಲ ಬರಬಹುದು. ದಯವಿಟ್ಟು ಅದು ಬರುವುದು ಬೇಡ.

ಒಬ್ಬ ಮಾನ್ಯ ಸದಸ್ಯರು : ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇದೆ.

ಶ್ರೀ ಆರ್.ಎಲ್. ಜಾಲಪ್ಪ : ದಯವಿಟ್ಟು ಅದು ಬರುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಏನಾಗುತ್ತಿದೆ? ಆದುದರಿಂದ ನಮ್ಮ ಭಾಗದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ವೆಂಟೆಡ್ ಡ್ಯಾಂಗಳನ್ನಾದರೂ ಮಾಡಿಕೊಡಬೇಕು. ಮತ್ತು ಫರ್ಟಿಲೇಷನ್ ಡ್ಯಾಮ್ಸ್ ಆಗಬೇಕು ದೊಡ್ಡ ದೊಡ್ಡ ಡ್ಯಾಂಗಳಂತೂ ನಮ್ಮಲ್ಲಿ ಆಗುವುದಿಲ್ಲ. ನೂರಾರು ಎಕರೆ ಇರಿಗೇಟ್ ಮಾಡುವಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಆದ್ದರಿಂದ ಸಣ್ಣಸಣ್ಣ ಫರ್ಟಿಲೇಷನ್ ಡ್ಯಾಂಗಳನ್ನಾದರೂ ಮಾಡಬೇಕೆಂದು ಹೇಳುತ್ತೇನೆ. ಎಷ್ಟೋ ಕಡೆ ಕೆರೆಗಳಲ್ಲಿ ನೀರು ಜಾಸ್ತಿಯಾಗಿ ಮಣ್ಣನ್ನು ಕೊರೆದುಕೊಂಡು ಹೋಗಿವೆ. ಅಂಥ ಕಡೆ ಬಂಡಿಂಗ್ ಜಾಸ್ತಿ ಮಾಡದಿದ್ದರೆ ಈಗ ಇರುವ ಕೆರೆಗಳು ಹಾಳಾಗುತ್ತವೆ. ಮೈನರ್ ಇರಿಗೇಷನ್ ಮಂತ್ರಿಗಳು ಹೇಳಿದ್ದಾರೆ, ಕೆರೆಗಳ ಹೂಳು ತೆಗೆಸುತ್ತೇವೆ ಎಂದು. ಅದು ಆಗದ ಕೆಲಸ ಅವರು 2-3 ಕೋಟಿ ರೂಪಾಯಿ ಖರ್ಚು ಮಾಡಿದರೂ ಆ ಕೆಲಸ ಆಗುವುದಿಲ್ಲ. ಹಿಂದೆ ನಾವು ನಾರು ಡೆವಲಪ್‌ಮೆಂಟ್ ಬೋರ್ಡ್ ಏನು ಮಾಡಿದ್ದೆವು ಆಗ ಎಲ್ಲರನ್ನೂ ಒಂದೇ ಸಮ ನೋಡುತ್ತಿದ್ದೆವು.

ಈಗ ತಾವು ಬಂದಮೇಲೆ ಎಲ್ಲಾ ಡೆವಲಪ್ಮೆಂಟ್ ಬೋರ್ಡ್ ಮಾಡಿಕೊಂಡು ಈ ದುಡ್ಡೆಲ್ಲಾ ಆ ಕಡೆ ತೆಗೆದುಕೊಂಡು ಹೋಗುತ್ತಿದ್ದೀರಿ. ಹೋಗಲಿ, ಅವರೂ ಡೆವಲಪ್ ಆಗಬೇಕು. ಮಾನ್ಯ ಚಂದ್ರೇಗೌಡರು ಹೇಳಿದಹಾಗೆ ಮಲೆನಾಡಿನಲ್ಲಿ...

ಶ್ರೀಮತಿ ಮೋಟಮ್ಮ : ನಾವು ಹೀಗೆ ಬೋರ್ಡ್ ಮಾಡಲಿಲ್ಲ, ಬೇಕುಬೇಕಾದಹಾಗೆ ಹಣ ಹಂಚಿಕೊಳ್ಳಲಿಲ್ಲ ಎಂದು ಹೇಳಿದಿರಲ್ಲಾ, ಕೆಲವರು ಸ್ಟ್ರಾಂಗ್ ಆಗಿರುತ್ತಾರೆ ಕೆಲವರು ಅನೇಮಿಕ್ ಇರುತ್ತಾರೆ. ಅನಿಮಿಕ್ ಇರುವವರಿಗೆ ಎಕ್ಸ್‌ಟ್ರಾ ಫುಡ್ ಕೊಡುವುದಿಲ್ಲವೇ? ಔಷಧಿ ಕೊಡುವುದಿಲ್ಲವೇ? ಹಾಗೆ ಮಲೆನಾಡು ಬೋರ್ಡ್ ಆಗಲೀ ಹೈದರಾಬಾದ್ ಡೆವಲಪ್ಮೆಂಟ್ ಬೋರ್ಡ್ ಆಗಲಿ.

ಶ್ರೀ ಆರ್.ಎಲ್. ಜಾಲಪ್ಪ : ನಾವೂ ಅನೀಮಿಕ್ ಪೇಷೆಂಟ್ಸ್. ಮಲೆನಾಡಿನಲ್ಲಿ ನಿಮಗೆ ಬೇಕಾದಷ್ಟು ಮಳೆ ಬರುತ್ತದೆ. 28 ಇಂಚು ಮಳೆ ಅಲ್ಲಿ ಬರುತ್ತದೆ. ನಮಗೆ ವರ್ಷಕ್ಕೆಲ್ಲಾ 28 ಇಂಚು ಇಲ್ಲವಲ್ಲಾ ಸ್ವಾಮಿ. ಏನು ಪುಣ್ಯಾತ್ಮರು ನೀವು. ಒಂದೇ ದಿವಸ 28 ಇಂಚು ಮಳೆ. ಆಮೇಲೆ ಈ ಗಂಗಾ ಕಲ್ಯಾಣ. ಇದು ಸುಮ್ಮನೆ ನಾಮಕಾವಸ್ತೆಗೆ ಇದೆ. ಕಡೇ ಪಕ್ಷ ಒಂದೊಂದು ಮಂಡಲಕ್ಕೆ ಹತ್ತು ಹತ್ತು ಗಂಗಾ ಕಲ್ಯಾಣ ಮಾಡಿ ಸ್ವಾಮಿ. ವರ್ಷಕ್ಕೆ 2 ಕೋಟಿ ರೂಪಾಯಿ ಆದರೂ ನಮಗೆ ಕೊಡದೇ ಇದ್ದರೆ ನಾವು ನಮ್ಮ ದುಡ್ಡಿನಲ್ಲೇ ನಮ್ಮ ಕನ್‌ಸಾಲಿಡೇಟೆಡ್ ಫಂಡ್ಸ್‌ನಲ್ಲೇ ಅಲ್ಲೆಲ್ಲಾ ಖರ್ಚು ಮಾಡಬೇಕಾಗುತ್ತದೆ. ದಯಮಾಡಿ ಗಂಗಾ ಕಲ್ಯಾಣ ಒಂದು ಮಂಡಲಕ್ಕೆ ಹತ್ತಾದರೂ ಕೊಡಲೇಬೇಕಾಗುತ್ತದೆ. ಆಮೇಲೆ ಯಾರು ಬೋರ್‌ವೆಲ್ಸ್ ತೆಗೆದುಕೊಳ್ಳುತ್ತಿದ್ದಾರೆ ಅವರಿಗೆ ಸ್ವಲ್ಪ ಸಬ್ಸಿಡಿಯಲ್ಲಿ ತಾವು ಒದಗಿಸಬೇಕಾಗುತ್ತದೆ. ಇಲ್ಲದೇಹೋದರೆ ಬಯಲುಪ್ರದೇಶದ ಅಭಿವೃದ್ಧಿ ಆಗುವುದಿಲ್ಲ. ಕೋಲಾರ ಗೋಲ್ಡ್ ಫೀಲ್ಡ್ ಇದೆ. ಅದು ಸುಮ್ಮನೆ ನಾಮಕಾವಸ್ತೆಗೆ ಇದೆ. ಅಲ್ಲಿ ಗೋಲ್ಡೂ ಇಲ್ಲ ಏನೂ ಇಲ್ಲ. ಯಾರಿಗೆ ಸಿಗುತ್ತಿದೆ ಗೋಲ್ಡ್? ಅದೂ ಮುಚ್ಚುತ್ತಿದ್ದಾರೆ. ಈಗ ಅಲ್ಲಿ ಕೆಲಸಗಾರರ ಜೀವನ ಮುಂದೆ ಹೇಗೋ ಗೊತ್ತಿಲ್ಲ. ಇದು ನೋಡಿದರೆ ಮಂಡಲಿ ಮಾಡಿದಿರುವುದು ಬರೀ ಟಿ.ಎ. ಡಿ.ಎ. ಕೊಡುವುದಕ್ಕೋಸ್ಕರವೋ ಏನೋ ಎಂದು ನನಗನ್ನಿಸುತ್ತದೆ. ಇಲ್ಲಿ ನೋಡಿ. "ಕಾರ್ಯದರ್ಶಿಗಳು : ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದ ವೇತನ ಮತ್ತು ಇತರೆ ಭತ್ಯಗಳನ್ನು ಪಡೆಯತಕ್ಕದ್ದು". ಕಾರ್ಯದರ್ಶಿಗಳ ಅಧಿಕಾರ ಡಿಫೈನ್ ಮಾಡುವುದು ಮೊದಲು ಶುರು ಮಾಡಿದ ತಕ್ಷಣ ಭತ್ಯ ಕೊಡಬೇಕಂತೆ. ಏನು ಸ್ವಾಮಿ ಬಿಲ್ ಇದು? ಎರಡನೆಯದು, ರಾಜ್ಯ ಸರ್ಕಾರವು ಕಾರ್ಯದರ್ಶಿಗೆ ಆಗಿಂದಾಗ್ಗೆ ಗೈರುಹಾಜರಿಗೆ ಅನುಮತಿ ನೀಡಬಹುದು. Do you call it a Bill? Is it for a development purpose that you have formed this Boarrd?

ಅಧ್ಯಕ್ಷ ಅವಧಿ ಮತ್ತು ಸೇವಾ ಷರತ್ತುಗಳನ್ನು ಎಂದು ಇದರಲ್ಲಿ ಇದೆ. ಡ್ಯೂಟೀಸ್ ಮತ್ತು ರೆಸ್ಪಾನ್ಸಿಬಲಿಟೀಸ್ ಏನೂ ಇಲ್ಲ. ಶುರುವಾದ ಕೂಡಲೇ ಭತ್ಯೆಗಳನ್ನು ಹಂಚಿಕೊಳ್ಳುವುದು.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿದ್ದರು)

ರಜಾ ತೆಗೆದುಕೊಳ್ಳುವುದು ಇದನ್ನೆಲ್ಲಾ ಸೇರಿಸಿಬಿಟ್ಟಿದ್ದಾರಲ್ಲಾ ಸ್ವಾಮಿ. ಇದರಲ್ಲಿ, ಈಗಾಗಲೇ ಜಿಲ್ಲಾ ಪರಿಷತ್ತಿಗೆ ಇರುವ ಅಧಿಕಾರವನ್ನು ಅರ್ಧಕ್ಕರ್ಧ ಕಿತ್ತುಕೊಂಡಿದ್ದಾರೆ. ಈಗ ಅಭಿವೃದ್ಧಿ ಮಂಡಲಿಗಳನ್ನು ಮಾಡಿ ಜಿಲ್ಲಾ ಪರಿಷತ್ತಿಗೆ ಏನೇನೂ ಮೂರು

ಕಾಸಿನ ಅಧಿಕಾರ ಸಿಗುವುದಿಲ್ಲ ಎಂದು ಕಾಣುತ್ತದೆ. ಅದರಲ್ಲೂ ವಿರೋಧಪಕ್ಷದವರೇನಾದರೂ ಗೆದ್ದು ಬಂದರೆ ಜಿಲ್ಲಾ ಪರಿಷತ್ತು ಬಾಗಿಲು ಮುಚ್ಚಬೇಕು. ಅಂಥ ಒಂದು ಪರಿಸ್ಥಿತಿಗೆ ತಾವು ತರುತ್ತಿದ್ದೀರಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಸರಿಯಾಗಿ ಓದಿ. ಜಿಲ್ಲಾ ಪರಿಷತ್ತಿಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಓದಿದ್ದೇನೆ. ಓದಿ ಅಂಡರ್‌ಲೈನ್ ಮಾಡಿದ್ದೇನೆ. ನನಗೆ ಗೊತ್ತಾಗಿದ್ದು ನಾನು ಹೇಳುತ್ತಿದ್ದೇನೆ. ಅದಿಲ್ಲ ಎಂದರೆ ತಾವು ಉತ್ತರದಲ್ಲಿ ಹೇಳಿ ನಾವು ಸಂತೋಷಪಡುತ್ತೇವೆ. ನಾನು ಅಭಿವೃದ್ಧಿ ಮಂಡಳಿಗಳಿಗೆ ವಿರೋಧವಾಗಿಲ್ಲ. ನಮಗೂ ಕೊಡಿ ಎಂದು ಹೇಳುತ್ತಿದ್ದೇವೆಯೇ ವಿನಾ..

ಶ್ರೀ ಡಿ.ಎ. ಚಿನ್ನಪ್ಪ : ವಿರೋಧಪಕ್ಷದವರು ಗೆದ್ದು ಬಂದರೆ ಜಿಲ್ಲಾ ಪರಿಷತ್ತು ಮುಗಿಸಿಬಿಡುತ್ತಾರೆ ಎಂದು ಹೇಳಿದಿರಿ. ವಿರೋಧಪಕ್ಷ ನೀವೇ ಈವತ್ತು ಇರುವುದು.

ಶ್ರೀ ಆರ್.ಎಲ್. ಜಾಲಪ್ಪ : ನಾವು ಸ್ವಾಗತಿಸುತ್ತಿದ್ದೇವೆ. ಇದಾಗಬೇಕು ಎಂದು ಹೇಳುತ್ತಿದ್ದೇವೆ. ಜಾಸ್ತಿ ಬೇಕಾಗಿರುವುದು ಕಲ್ವರ್ಟ್ಸ್, ಬ್ರಿಡ್ಜಸ್ ಮತ್ತು ರೋಡ್ಸ್ ಬೇಕು ಅಷ್ಟೇ ನಿಮಗೆ. ಮಿಕ್ಕಿದ್ದೆಲ್ಲಾ ಇದೆ ನಿಮಗೆ. ನಾವು ವಿರೋಧ ಮಾಡುತ್ತಿಲ್ಲ, ಇದನ್ನು ಸ್ವಾಗತಿಸುತ್ತೇವೆ. ಎಲ್ಲಾ ಮಾಡಿ ಮಾಡಿ ಆ ಕಡೆ ನಾಲ್ಕು ಜಿಲ್ಲೆ ಈ ಕಡೆ ನಾಲ್ಕು ಜಿಲ್ಲೆ ಹಂಚಿಕೊಂಡು ಹೋದರೆ ನಮ್ಮನ್ನು ನೋಡುವವರು ಯಾರು ಮೈದಾನ ಪ್ರದೇಶವನ್ನು? ಈ ಕಡೆಯೂ ಗಮನ ಕೊಡಿ ಎಂದು ಹೇಳಿ ಈ ಬಿಲ್ಲನ್ನು ನಾನು ಸ್ವಾಗತಿಸುತ್ತಿದ್ದೇನೆ.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೇ, ಈಗ ತಾನೇ ತಂದಿರತಕ್ಕ ಮಲೆನಾಡು ಅಭಿವೃದ್ಧಿ ಮಂಡಲಿ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡಿ ಒಂದೆರೆಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಲೆನಾಡು ಎಂದರೆ ಒಂದು ವೈಶಿಷ್ಟ್ಯವಾದಂಥ ಪ್ರದೇಶ. ಅದನ್ನು ನಮ್ಮ ವಿರೋಧಪಕ್ಷದ ನಾಯಕರು ಬಹಳ ಛಲೋದಾಗಿ ಹೇಳಿದರು. ಕಾಡುಗಳು, ಗುಡ್ಡಗಳು, ಪರ್ವತಗಳು ನದಿಗಳು, ಏರುಗಳು, ತಗ್ಗುಗಳು ಹೀಗೆ ಕೂಡಿರತಕ್ಕ ಒಂದು ವೈಶಿಷ್ಟ್ಯವಾದ ಒಂದು ಪ್ರದೇಶ. ಇಲ್ಲಿ ಅರಣ್ಯ ಸಂಪತ್ತು ತುಂಬಿ ತುಳುಕುತ್ತಿದೆ. ಗಂಧ, ತೇಗ, ಬೀಟೆ, ಹಲಸು ಇಂಥ ಉಪಯುಕ್ತವಾದಂಥ ಮರಗಳು ಅರಣ್ಯ ಸಂಪತ್ತು ಇದ್ದರೂ ಕೂಡ ಅದನ್ನು ಉಳಿಸತಕ್ಕ ವ್ಯವಸ್ಥೆ ಕೂಡ ಇಲ್ಲದ ಈ ಮಲೆನಾಡು ಭಾಗದಲ್ಲಿ ಇರತಕ್ಕ ಅನೇಕರಿಗೆ ತುಂಬ ಕಷ್ಟ ಕೂಡ ಒದಗಿಸಿಕೊಟ್ಟಿರುವುದು ನಾವು ಕಾಣುತ್ತಿದ್ದೇವೆ. ಅದು ಮಾತ್ರವಲ್ಲ, ವಿದ್ಯುತ್ ಕೂಡ ಮಲೆನಾಡು ಪ್ರದೇಶದಿಂದಲೇ ಇಡೀ ಕರ್ನಾಟಕಕ್ಕೆ ಬರತಕ್ಕದ್ದು ಎಂಬುದು ನಮಗೆಲ್ಲಾ ಗೊತ್ತಿದೆ.

ಹೀಗೆಲ್ಲಾ ಇದ್ದರೂ ಕೂಡಾ ಆ ಮಲೆನಾಡಿನ ಪ್ರದೇಶದ ಜನರು ಎಷ್ಟೊಂದು ಕಷ್ಟದಲ್ಲಿದ್ದಾರೆ, ಎಷ್ಟೊಂದು ನಷ್ಟದಲ್ಲಿದ್ದಾರೆ, ಎಷ್ಟೊಂದು ಸೌಕರ್ಯ ಇಲ್ಲದೇ, ಅಭಿವೃದ್ಧಿ ಇಲ್ಲದೇ ಎಷ್ಟು ಕಂಗಾಲಾಗಿದ್ದಾರೆಂಬುದು ಸರ್ವೆ ಮಾಡಿದರೆ ಮಾತ್ರ ಗೊತ್ತಾಗತಕ್ಕ ವಿಚಾರ. ಇದರ ಬಗ್ಗೆ ನಮ್ಮ ಕವಿಗಳು, ಸಾಹಿತಿಗಳು ಕೂಡ ಅನೇಕ ರೀತಿಯಲ್ಲಿ ಒಳ್ಳೊಳ್ಳೆಯ ಅಭಿಪ್ರಾಯಗಳನ್ನು ಹೇಳಿದ್ದಾರೆ. ರಾಷ್ಟ್ರಕವಿಗಳಾದಂತಹ

ಕುವೆಂಪು ಅವರು ತಮ್ಮ ಕಾನೂನು ಸುಬ್ಬಮ್ಮ ಹೆಗ್ಗಡತಿ ಎನ್ನುವ ಕಾದಂಬರಿಯಲ್ಲಿ ಅದೇ ರೀತಿ ಮಲೆನಾಡಿನಲ್ಲಿ ಮದುಮಗಳು ಎನ್ನುವ ಕಾದಂಬರಿಯಲ್ಲಿ ಅತ್ಯಂತ ಸುಂದರವಾಗಿ ಮಲೆನಾಡಿನ ಚಿತ್ರಣವನ್ನು ವೈಶಿಷ್ಟ್ಯವಾಗಿ ಹೇಳಿದ್ದಾರೆ. ಮಲೆನಾಡಿನಲ್ಲಿ ಹೇಗಿದೆ ಏನಿದೆ ಎಂತದ್ದು, ಕಷ್ಟ ಏನು ಅಲ್ಲಿರತಕ್ಕ ಜನರಿಗೆ ಇರತಕ್ಕ ತೊಂದರೆ ಏನು ಎಂಬುದನ್ನು ಕೂಡ ಬಹಳ ಛಲೋದಾಗಿ ಆ ಕಾನೂನು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆನಾಡಿನಲ್ಲಿ ಮದುಮಗಳು ಎಂಬ ಕಾದಂಬರಿಯಲ್ಲಿ ಹೇಳಿದ್ದಾರೆ. ಅವರ ಪುತ್ರರಾದ ಪೂರ್ಣಚಂದ್ರ ತೇಜಸ್ವಿಯವರೂ ಕೂಡಾ ಈ ಮಲೆನಾಡಿಗೆ ಬೇಕಾದ ವಿಚಾರಗಳನ್ನು ಅವರು ಅಷ್ಟು ಚೆನ್ನಾಗಿ ವಿವರಿಸಿ ಅವರೂ ಕೂಡಾ ಈಗ ಅನೇಕ ಲೇಖನ ಬರೆದಿದ್ದು ನಾವು ಅದನ್ನು ಕಾಣುತ್ತಿದ್ದೇವೆ. ಅದೇ ರೀತಿ ಕೆದಂಬಾಡಿ ಜತ್ತಪ್ಪರೈ ಅವರು ಬೇಟೆಯ ನೆನಪುಗಳು "ಈಡೊಂದು ಹುಲಿ ಎರಡು" ಎನ್ನತಕ್ಕ ಎರಡು ಪುಸ್ತಕಗಳಲ್ಲಿ ಇಡೀ ಮಲೆನಾಡಿನ ಚಿತ್ರ, ಅಲ್ಲಿರತಕ್ಕ ಪ್ರಾಣಿಗಳ ಚಿತ್ರ, ಅಲ್ಲಿರತಕ್ಕ ಬೇಟೆಗಾರರ ಚಿತ್ರ, ಆ ಮಲೆನಾಡಿನಲ್ಲಿರುವ ತೊಂದರೆಗಳ ವಿಚಾರಗಳನ್ನು ಅತ್ಯಂತ ಸುಂದರವಾಗಿ, ಅತ್ಯಂತ ಒಳ್ಳೆಯ ರೀತಿಯಲ್ಲಿ ಬರೆದು ನಮಗೆಲ್ಲಾ ತಿಳಿಸಿದ್ದಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಮಲೆನಾಡಿನ ಬಗ್ಗೆ ಅಧ್ಯಯನ ಮಾಡುವುದಕ್ಕೆ ಬಹಳ ಇದೆ. ಅದನ್ನು ಅಧ್ಯಯನ ಮಾಡಿದರೆ ಮಲೆನಾಡಿನ ಸೌಂದರ್ಯ, ಮಲೆನಾಡಿನ ಸಂಪತ್ತು, ಮಲೆನಾಡಿನ ಸುಖ, ಅದರ ಜೊತೆಯಲ್ಲಿ ಅಲ್ಲಿರತಕ್ಕ ಜನರೋ, ಕಾಡುಕೊರಗರು, ಮಲೆನಾಡಿನಲ್ಲಿ ವಾಸಿಸತಕ್ಕ ಜನರು, ಅವರಿಗೆ ಗುಡಿಸಲು ಇಲ್ಲ, ಅವರಿಗೆ ಒಂದು ಮಾರ್ಗ ಇಲ್ಲ, ಅವರಿಗೆ ಒಂದು ಸಂಪರ್ಕ ಇಲ್ಲ, ಅವರಿಗೆ ಒಂದು ಸಾರಿಗೆ ವ್ಯವಸ್ಥೆ ಇಲ್ಲ, ಅವರಿಗೆ ಒಂದು ಬಾವಿ ಇಲ್ಲ, ಬೇಕಾದಂತಹ ಯಾವ ಸೌಕರ್ಯವೂ ಇಲ್ಲ. ಈ ಮಲೆನಾಡಿನ ಅನೇಕ ಭಾಗಗಳಲ್ಲಿ ಜನ ಕಷ್ಟದಲ್ಲಿದ್ದಾರೆ. ಅದೇ ರೀತಿಯಲ್ಲಿ ಮೇಲ್ಭಾಗದಲ್ಲಿ ಚಿಕ್ಕಮಗಳೂರು, ಅದೇ ರೀತಿಯಲ್ಲಿ ಶಿವಮೊಗ್ಗದವರೆಗೂ ಕೂಡಾ ಮಲೆನಾಡಿಗೆ ಸೇರಿರತಕ್ಕ ಅತ್ಯುತ್ತಮ ಪ್ರದೇಶ. ಆದುದರಿಂದ ಇವತ್ತು ಮಲೆನಾಡಿನ ಪ್ರದೇಶದ ಅಭಿವೃದ್ಧಿಗಾಗಿ ಈ ರೀತಿಯ ವ್ಯವಸ್ಥೆ ಮಾಡುವುದು ಬಹಳ ಮುಖ್ಯ. ಏಕೆಂದರೆ ಮಲೆನಾಡಿನ ಬಗ್ಗೆ ಏನೋ ಒಳ್ಳೆಯ ಸೌಂದರ್ಯಯುಕ್ತವಾದ ಕಾಡು ಇದೆ. ಸಂಪತ್ತು ಇದೆ, ಈ ಜನರೆಲ್ಲಾ ಒಳ್ಳೆಯವರಿದ್ದಾರೆ ಎಂದು ಜನ ಭಾವಿಸುತ್ತಿದ್ದಾರೆ. ಆದರೆ ಒಳಗಿಂದೊಳಗೆ ನೋಡಿದರೆ ಅಲ್ಲಿ ಎಷ್ಟು ಕಷ್ಟ ಇದೆ ಎಂಬುದನ್ನು ನಾವು ತೀಕ್ಷ್ಣವಾಗಿ, ಸೂಕ್ಷ್ಮವಾಗಿ ಅವಲೋಕಿಸಿದರೆ ಮಾತ್ರ ನಮಗೆ ಗೊತ್ತಾಗುತ್ತದೆ. ಈಗ ಮಲೆನಾಡಿನಿಂದ ಬಂದಿರುವ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಇದನ್ನು ಅವರು ಸ್ವಾಗತ ಮಾಡಿದ್ದಾರೆ . ನನಗೆ ಬಹಳ ಸಂತೋಷವಾಯಿತು. ಮಲೆನಾಡಿನ ಬಗ್ಗೆ ಕೆಲವರಿಗೆ ತಪ್ಪು ಕಲ್ಪನೆ ಇದೆ. ಅದು ಅಲ್ಲ. ಉತ್ತರಕನ್ನಡ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಇದೇ ರೀತಿಯಲ್ಲಿ ಇರತಕ್ಕ ಇನ್ನೂ ಅನೇಕ ಭಾಗಗಳು ಸೇರಿ ಒಂದು ಶೃಂಗದಹಾಗೆ...

ಒಬ್ಬ ಮಾನ್ಯ ಸದ್ಯರು : ಹಾಸನವನ್ನು ಹೇಳಲಿಲ್ಲ.

ಶ್ರೀ ಬಿ.ಎಂ. ಇದಿನಬ್ಬ : ಹಾಸನ ಎಲ್ಲಾ ಇದೆ. ಅದನ್ನೆಲ್ಲಾ ಹೇಳಿದರೆ ಉದ್ದವಾಗುತ್ತದೆ. ಈ ರೀತಿಯಲ್ಲಿ ಮಲೆನಾಡಿನ ಈ ಒಂದು ವ್ಯವಸ್ಥೆಯನ್ನು, ಅಭಿವೃದ್ಧಿಯನ್ನು ಮಾಡುವುದು ಬಹಳ ಮುಖ್ಯ. ಆದುದರಿಂದ ಇವತ್ತು ಅಲ್ಲಿರತಕ್ಕ

ಕಾಡುಕೊರಗರಾಗಲೀ, ಕಾಡಿನಲ್ಲಿರುವ ಮಲೆನಾಡಿನ ಜನರ ಬಗ್ಗೆ ಹೇಳುವುದಾದರೆ ಉದಾಹರಣೆಗೆ ಧರ್ಮಸ್ಥಳದ ಹತ್ತಿರ ದಿಡುಪೆ ಎನ್ನತಕ್ಕ ಹಳ್ಳಿ ಇದೆ. ಅಲ್ಲಿಗೆ ಯಾವ ರೀತಿಯ ಸೌಕರ್ಯವೂ ಮಾಡಿರಲಿಲ್ಲ. ಕಡೆಗೆ ಉದಯವಾಣಿ ಪತ್ರಿಕೆಯವರು ಒಂದು ವ್ಯವಸ್ಥೆಯನ್ನು ಮಾಡಿ ಯಾವುದು ಬಹಳ ಹಿಂದುಳಿದಿರತಕ್ಕ ಮಲೆನಾಡಿನಲ್ಲಿ ಹಳ್ಳಿ ಎಂದು ಹುಡುಕಿದಾಗ, ದಿಡುಪೆ ಎಂಬ ಹಳ್ಳಿಯು ಮಲೆನಾಡಿನಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಹಳ್ಳಿ ಎಂದು ತಿಳಿದುಬಂತು. ಅಲ್ಲಿ ರಸ್ತೆ ಇಲ್ಲ, ಸಾರಿಗೆ ವ್ಯವಸ್ಥೆ ಇಲ್ಲ, ಅಲ್ಲಿ ಕುಡಿಯುವ ನೀರು ಇಲ್ಲ, ಅಲ್ಲಿ ಬೇಕಾದ ಯಾವ ವ್ಯವಸ್ಥೆ ಇಲ್ಲವೆಂದು ತಿಳಿದು ಆ ಹಳ್ಳಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ವ್ಯವಸ್ಥೆ ಮಾಡಲಾಗಿ ದಿಡುಪೆಗೆ ಎಲ್ಲಾ ಸೌಕರ್ಯಗಳು ದೊರಕುವ ವ್ಯವಸ್ಥೆಯಾಗಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಮಲೆನಾಡಿನಲ್ಲಿ ಅನೇಕ ರೀತಿಯ ತೊಂದರೆಗಳು ಇವೆ. ಮಲೆನಾಡು ಹಸಿರಾಗಿ ಚೆಂದವಾಗಿ ಕಂಡರೂ ಕೂಡಾ ಅಲ್ಲಿ ಒಳಗಿರತಕ್ಕ ಜನರಿಗೆ ಯಾವ ಸೌಕರ್ಯವೂ ಇಲ್ಲ ಯಾವ ವ್ಯವಸ್ಥೆ ಇಲ್ಲ. ಆದುದರಿಂದ ಇಂತಹ ಒಂದು ಮಲೆನಾಡು ಅಭಿವೃದ್ಧಿ ಸಂಸ್ಥೆಯಾದರೆ ನಿಜವಾಗಿ ಆ ಕಡೆ ಇರುವ ಜನರಿಗೆ ಈ ಬಡವರಿಗೆ ಆ ಕಷ್ಟದಲ್ಲಿರುವ ಜನರಿಗೆ ಏಕಪ್ರಕಾರವಾಗಿ ಸಹಾಯ ಮಾಡುವಂಥ ಪರಿಸ್ಥಿತಿ ಒದಗಬಹುದು. ಇದಲ್ಲದೇ ಮಲೆನಾಡಿನ ಸೌಂದರ್ಯವನ್ನು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ದೇಶದಲ್ಲಿ ಹೊಗಳುತ್ತಿದ್ದಾರೆ. ಕವಿ ಕುವೆಂಪುರವರು

ಮಲೆನಾಡಿಗೆ ಹೋಂಕುಳಿ ಹೋಗುವ ಮನ ಕಾಡಾಣಕೆ
ಗಿಳಿಕೋಗಿಲೆ ಗಿಂಪಿಗೆ ಮಲ್ಲಿಗೆ ಸಂಪಿಗೆ ಕೇದಿಗೆ ಸೊಂಪಿಗೆ
ಮಾವಿನ ಹೊಂಗೆಯ ತಳಿರಿನ ತಂಪಿಗೆ ರಸ ರೋಮಾಂಚನ
ಗೊಳುವಾತನ ಮನ

ಎಲ್ಲಿದ್ದರೆ ಏನು ಎಂತಿದ್ದರೆ ಏನು ಎಂದೆಂದಿಗೂ ತಾನ್ ಕನ್ನಡವೇ ಸತ್ಯ ಎಂದು ಕುವೆಂಪುರವರು ಹೇಳಿದ್ದಾರೆ. ಆದುದರಿಂದ ಈ ಮಲೆನಾಡು ಅಬಿವೃದ್ದಿಗೆ ತಂದಿರುವ ಈ ತಿದ್ದುಪಡಿಯನ್ನು ಸ್ವಾಗತಿಸಿ ಇದು ಅನುಷ್ಠಾನಕ್ಕೆ ಬರಲಿ ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಶ್ರೀಯುತ ವಾಟಾಳ್‌ನಾಗರಾಜ್‌ರವರು ಮಾತನಾಡಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ವಾಟಾಳ್‌ನಾಗರಾಜ್‌ರವರು ಮಲೆನಾಡು ಪ್ರದೇಶದವರಲ್ಲ.

ಶ್ರೀ ವಾಟಾಳ್ ನಾಗರಾಜ್ : ನನ್ನ ತಾಲ್ಲೂಕು ಮಲೆನಾಡು ಪ್ರದೇಶಕ್ಕೆ ಸೇರಬೇಕೆಂದು ಮಾತನಾಡುತ್ತೇನೆ. ನನ್ನ ತಾಲ್ಲೂಕು ಮಲೆನಾಡು ಪ್ರದೇಶಕ್ಕೆ ಸೇರಿಲ್ಲ.

ಶ್ರೀ ಕರಿಯಣ್ಣ : ನಮ್ಮ ಭಾಗ ಮಲೆನಾಡಿನಲ್ಲಿದ್ದರೂ ಮಲೆನಾಡಿಗೆ ಸೇರಿಲ್ಲ. ನಾವು ನಮ್ಮ ಭಾಗವನ್ನು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗೆ ಸೇರಿಸಿ ಎಂದು ಹೇಳಬೇಕಾಗುತ್ತದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಸುಮ್ಮನೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕರಿಯಣ್ಣನವರು ಏನೋ ಹೇಳುತ್ತಿದ್ದಾರೆ?

ಉಪಾಧ್ಯಕ್ಷಿಣಿಯವರು : ನೀವು ಮಲೆನಾಡಿಗೆ ಸೇರಿದವರಲ್ಲ, ನೀವು ಏತಕ್ಕೆ ಮಾತನಾಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಜಿ. ರಾಜುಗೌಡ : ನಮಗೆಲ್ಲಾ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ವಾಟಾಳ್‌ನಾಗರಾಜ್‌ರವರ ಹೆಸರು ಇಲ್ಲಿ ಮೊದಲು ಬರಬೇಕು.

ಶ್ರೀ ಕರಿಯಣ್ಣ : ಮಲೆನಾಡು ಪ್ರದೇಶಕ್ಕೆ ಸೇರಿರುವವರು ಸೇರಿಲ್ಲವೆಂದು ಹೇಳುತ್ತಿದ್ದಾರೆ. ನಾವು ನಮ್ಮ ಭಾಗವನ್ನು ಏತಕ್ಕೆ ಸೇರಿಸಬೇಕೆಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷಿಣಿಯವರು : ಮಾನ್ಯ ವಾಟಾಳ್‌ನಾಗರಾಜ್‌ರವರು ಈ ಬಿಲ್ಲಿಗೆ ಅಮೆಂಡ್‌ಮೆಂಟ್ ತಂದಿದ್ದಾರೆ. ಅದರ ಬಗ್ಗೆ ಅವರು ಮಾತನಾಡುತ್ತಾರೆ.

ಶ್ರೀ ಕರಿಯಣ್ಣ : ಅವರು ಅಮೆಂಡ್‌ಮೆಂಟ್ ತಂದಿದ್ದಾರೆ. ನಾವೂ ತರಬೇಕಾಗುತ್ತದೆ. ನಮ್ಮ ಭಾಗ ಮಲೆನಾಡಿನ ಅಭಿವೃದ್ಧಿ ಮಂಡಳಿಗೆ ಸೇರಿಲ್ಲ ಸೇರಿಸಬೇಕೆಂದು ನಾವು ಹೇಳಬೇಕಾಗುತ್ತದೆ. ಅಮೆಂಡ್‌ಮೆಂಟ್ ತಂದರು ಎಂದು ಮಲೆನಾಡಿಗೆ ಸೇರಿದವರಿಗೆ ನೀವು ಅವಕಾಶ ಕೊಡುತ್ತಾ ಹೋದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷಿಣಿಯವರೇ, ನಮ್ಮ ತಾಲ್ಲೂಕು ಮಲೆನಾಡಿಗೆ ಸೇರಿಲ್ಲ, ಮಾನ್ಯ ಕರಿಯಣ್ಣನವರು ಮಲೆನಾಡಿಗೆ ಸೇರಿಸಿದ್ದಾರೆಂದು ಹೇಳಿದ್ದಾರೆ. ಇದರಲ್ಲಿ ಒಂದು ಪ್ರಶ್ನೆ ಮೂಲಭೂತವಾಗಿಯೂ ನಾನು ಯಾರ ಬಗ್ಗೆಯೂ ವಿರೋಧ ನನಗೇನೂ ಇಲ್ಲ. ಹೈದರಾಬಾದ್ ಕರ್ನಾಟಕವಾಗಲೀ ಈ ಕಡೆಯ ಬೆಂಗಳೂರು ಜಿಲ್ಲೆಯಾಗಲೀ, ಕೋಲಾರ ಜಿಲ್ಲೆಯಾಗಲೀ, ನಾನು ಯಾರನ್ನೂ ಪ್ರಶ್ನೆಮಾಡುತ್ತಿಲ್ಲ. ಇಡೀ ಸಮಗ್ರವಾಗಿ ಕರ್ನಾಟಕ 20 ಜಿಲ್ಲೆಗಳು ನನಗೆ ಒಂದೇ. ನಾನು ಈ ಜಿಲ್ಲೆ ಬೇರೆ ಆ ಜಿಲ್ಲೆ ಬೇರೆಯೆಂದು ಭೇಧಭಾವ ಮಾಡತಕ್ಕವನು ಅಲ್ಲ. ನಾನೆಂದೂ ಆ ರೀತಿ ಮಾತನಾಡತಕ್ಕವನಲ್ಲ, ಶ್ರೀಮಾನ್ ಚಂದ್ರೇಗೌಡರು ಹೇಳುವಾಗ ರಾಷ್ಟ್ರಕವಿ ಕುವೆಂಪುರವರು ಹುಟ್ಟಿದಂತಹ ಒಳ್ಳೆಯ ಭೂಮಿ ಮಲೆನಾಡು ಎಂದು ಹೇಳಿದರು. ಅದನ್ನು ನಾನು ಒಲ್ಲೆ, ಆದರೆ ಅದೇ ರಾಷ್ಟ್ರಕವಿಯವರು "ಭಾರತ ಜನನಿಯೇ ತನುಜಾತೆ ಜಯಹೇ ಕರ್ನಾಟಕ ಮಾತೆ" ಎಂದು ಹೇಳಿದ್ದಾರೆ. ಮಂಗಳೂರು ಅಥವಾ ಇನ್ನೊಂದು ಮಾತೆಯೆಂದು ಅವರು ಹೇಳಿಲ್ಲ, ಹೈದಾರಾಬಾದ್-ಕರ್ನಾಟಕ ಮಾತೆ ಎಂದು ಹೇಳಿಲ್ಲ, ಮಲೆನಾಡು ಮಾತೆ ಎಂದು ಅವರು ಹೇಳಿಲ್ಲ. "ಭಾರತ ಜನನಿಯೇ ತನುಜಾತೆ ಜಯಹೇ ಕರ್ನಾಟಕ ಮಾತೇ" ಈ ಮಾತನ್ನು ಮಾನ್ಯ ಇದಿನಬ್ಬರವರೇ, ಯಾರು ಹೇಳಿದ್ದು? ರಾಷ್ಟ್ರಕವಿ ಕುವೆಂಪುರವರು ಹೇಳಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, 1956ರಲ್ಲಿ ಕರ್ನಾಟಕ ಏಕೀಕರಣವಾಯಿತು. ಕರ್ನಾಟಕ ಏಕೀಕರಣಕ್ಕಾಗಿ ಒಂದು ಸಮಗ್ರವಾದಂತಹ ತ್ಯಾಗ, ಬಲಿದಾನ ಹೋರಾಟ ನಡೆದಿದೆ. ಈ ರಾಜ್ಯದಲ್ಲಿ, ಆವೊತ್ತು ಅದೇ ಹೈದಾರಬಾದ್ ಕರ್ನಾಟಕ ಅಬಿವೃದ್ಧಿ ಮಂಡಲಿ ಪ್ರಶ್ನೆಯನ್ನು ಮಾನ್ಯ ವೀರೇಂದ್ರಪಾಟೀಲ್‌ರವರು ತಂದಾಗ ನಾನು ಅದನ್ನು ವಿರೋಧ ಮಾಡಲಿಲ್ಲ. ನಾನೊಂದು ಕವಿ ಮಾತನ್ನು ಅವರಿಗೆ ಹೇಳಿದೆ. ಈ ರೀತಿ ಯಾದಂತಹ

ಒಂದೊಂದು ಪ್ರದೇಶಗಳಿಗೆ ಒಂದೊಂದು ಮಂಡಳಿಯನ್ನು ರಚನೆ ಮಾಡುವುದಾದರೆ, ಕರ್ನಾಟಕ ಏಕೀಕರಣದ, ಒಂದು ಉದ್ದೇಶ, ತತ್ವ, ನೀತಿ ನಾವೆಲ್ಲಾ ಒಂದೇ, ಈ ನಾಡು ಒಂದೇ, ಕನ್ನಡನಾಡು ಒಂದೇ, ಕರ್ನಾಟಕ ಒಂದೇ, ಕನ್ನಡಿಗರೆಲ್ಲ ಒಂದೇ ಎನ್ನತಕ್ಕ ತತ್ವ ಏನಿದೆ ಇದರಲ್ಲಿ ಸಂಶಯ ಬಂದೀತು ಅದು ಬರಬಾರದು ಎನ್ನತಕ್ಕ ವಿಚಾರದಲ್ಲಿ ನಾನು ಅವರನ್ನು ಪ್ರಶ್ನೆ ಮಾಡಿದ್ದೆ. ನಿಜ ಅವರು ಹೇಳಿದರು, ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದಿದೆ, ಅದನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಕಾರಣ ಯಾರು? ಮಲೆನಾಡುಪ್ರದೇಶ ಹಿಂದುಳಿಯಲಿಕ್ಕೆ, ಹೈದರಾಬಾದ್ ಕರ್ನಾಟಕ ಹಿಂದುಳಿಯಲಿಕ್ಕೆ ಕರ್ನಾಟಕದ ಯಾವುದೇ ಜಿಲ್ಲೆ ಹಿಂದುಳಿಯಲಿಕ್ಕೆ ಯಾರು ಹೊಣೆಗಾರರು? ಯಾರು ಅಂದರೆ ಯಾರು ಈ ಸರ್ಕಾರಗಳನ್ನು ನಡೆಸಿಕೊಂಡು ಬಂದರು ಅವರು ಕರ್ನಾಟಕವನ್ನು ಒಂದೇ ಸಮನೆ ನೋಡಬೇಕಾಗಿತ್ತು. ರಸ್ತೆಗಳ ಪರಿಸ್ಥಿತಿಯಾಗಲಿ, ಅಭಿವೃದ್ಧಿಗಳ ಕೆಲಸವಾಗಲಿ, ವಿದ್ಯುಚ್ಛಕ್ತಿ ಪರಿಸ್ಥಿತಿಯಾಗಲಿ, ನೀರಾವರಿ ಪರಿಸ್ಥಿತಿಯಾಗಲಿ, ದೀಪದ ಪರಿಸ್ಥಿತಿಯಾಗಲಿ, ಯಾವುದೇ ವ್ಯವಸ್ಥೆಯನ್ನು ಸಮಗ್ರವಾಗಿ ನೋಡಬೇಕಾಗಿತ್ತು. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ನೋಡಬೇಕು. ಈ ರೀತಿಯಾಗಿ ನೀವು ಹೈದರಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಇವುಗಳನ್ನು ಮಾಡುವುದಾದರೆ, ಹಾಗಾದರೆ ನಿಮ್ಮ ಸರ್ಕಾರಗಳು ಸಂಪೂರ್ಣವಾಗಿ ಈ ಪ್ರದೇಶಗಳನ್ನು ಕಡೆಗಣಿಸಲಾಗಿದೆ ಎಂದಾಯಿತು. ನಿಜವಾಗಿಯೂ ನೀವು ಉದ್ದೇಶ ಪೂರ್ವಕವಾಗಿ ಆ ಪ್ರದೇಶಗಳನ್ನು ಕಡೆಗಣಿಸಿದ್ದೀರಿ ಎಂದು ನನಗನಿಸುತ್ತಿದೆ. ಈ ರೀತಿ ಮಂಡಳಿಗಳನ್ನು ಮಾಡಿ ಯಾರನ್ನೋ ಒಂದು ರೀತಿಯಲ್ಲಿ ತೃಪ್ತಿಪಡಿಸುವುದಕ್ಕೆ ಬದಲು ಸಮಗ್ರವಾಗಿ ಇಡೀ ಕರ್ನಾಟಕದ ಪ್ರತಿ ಅಂಗುಲ ಪ್ರತಿ ಇಂಚು ಭೂಮಿಯಲ್ಲಿ ಎಲ್ಲೆಲ್ಲಿ ಹಿಂದುಳಿದ ಯಾವ ಆ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕು ಎಂಬುದರ ಬಗ್ಗೆ ನೀವು ಗಮನಹರಿಸಬೇಕಾದದ್ದು ನಿಮ್ಮ ಕರ್ತವ್ಯ.

ಶ್ರೀ ವೀರೇಂದ್ರ ಪಾಟೀಲರು ಬಂದರು, ನಮಗೆ ಹೈದರಾಬಾದ್ ಕರ್ನಾಟಕ ಮಂಡಳಿ ಆಯಿತು. ಶ್ರೀಮಾನ್ ಬಂಗಾರಪ್ಪನವರು ಬಂದರು. ಶಿವಮೊಗ್ಗದವರು, ಅವರು ಸ್ವಲ್ಪ ಮಲೆನಾಡು ಕಡೆಯವರು, ನಮ್ಮ ಚಂದ್ರೇಗೌಡರು ಇದ್ದಾರೆ, ಅವರ ಮಂಡಳಿ ಆಯಿತು. ನಾಳೆ ಕೋಲಾರದವರು, ಶ್ರೀ ವೆಂಕಟಪ್ಪನವರು ಮುಖ್ಯಮಂತ್ರಿಗಳಾದರೆ, ನಮಗೆ ಒಂದು ಮಂಡಳಿ ಆಗುತ್ತದೆ. ಇದು ಮುಖ್ಯಮಂತ್ರಿಗಳು ಆದಾಗಲೆಲ್ಲಾ ಒಂದೊಂದು ಮಂಡಳಿಯನ್ನು ಮಾಡುತ್ತಾ ಕುಳಿತುಕೊಂಡರೆ ನಮ್ಮ ಉದ್ದೇಶಗಳು ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ವಿಶೇಷ ಪರಿಸ್ಥಿತಿಗಳಿವೆ ಎಂದು ಅದರ ಅಭಿವೃದ್ಧಿಗಾಗಿ ಮಂಡಳಿಯೇ ಹೊರತು ಸಂಬಂಧಪಟ್ಟವರು ಮುಖ್ಯಮಂತ್ರಿಗಳಾದರು ಅಂತ ಅಲ್ಲ, ನೀವು ಇಷ್ಟೆಲ್ಲಾ ಸಮಗ್ರವಾಗಿ ಕನ್ನಡ ನಾಡಿನ ಚಿಂತನೆ ಮಾಡುವವರು ಆಡಳಿತಾತ್ಮಕವಾದಂಥ ವಿಶೇಷ ಪರಿಸ್ಥಿತಿಯನ್ನು ಗಮನಿಸಿ ಅದರ ಅಭಿವೃದ್ಧಿಗಾಗಿ...

(ಗೊಂದಲ)

ಉಪಾಧ್ಯಕ್ಷಿಣಿಯವರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ಶ್ರೀ ವಾಟಾಳ್‌ನಾಗರಾಜ್ ಅವರನ್ನು ಈಗ ಮಾತನಾಡುವುದಕ್ಕೆ ಕರೆದಿದ್ದೇನೆ. ಬೇರೆಯವರು

ಯಾರಾದರೂ ಮಾತನಾಡಿದರೆ, ಯಾವುದೂ ದಾಖಲೆಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆಗಳನ್ನು ದಾಖಲು ಮಾಡಿಕೊಳ್ಳಲಿಲ್ಲ)

ಉಪಾಧ್ಯಕ್ಷಿಣಿಯವರು : ಅವರು ಮಾತನಾಡಿದ ಮೇಲೆ ನಾನು ಬೇರೆಯವರಿಗೆ ಅವಕಾಶ ಕೊಡುತ್ತೇನೆ. ಈಗ ಶ್ರೀ ಕಮರುಲ್ ಇಸ್ಲಾಂ ಅವರು ಏನೋ ಮಾತನಾಡಬೇಕು ಎಂದು ಕೇಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ದಯವಿಟ್ಟು ಕುಳಿತುಕೊಳ್ಳಿ. ಇಷ್ಟು ಜನ ಒಂದೇ ಕಾಲದಲ್ಲಿ ನಿಂತುಕೊಂಡರೆ ಹೇಗೆ? ನಾನು ಈಗ ಶ್ರೀ ವಾಟಾಳ್ ನಾಗರಾಜ್ ಅವರನ್ನು ಕರೆದಿದ್ದೇನೆ. ಅವರು ಬೇಗ ಮುಗಿಸಲಿ.

SRI QAMARUL ISLAM : Mr. Vatal Nagaraj has yielded to me. I just wanted to say something.

SIR QAMARUL ISLAM : You were kind enough to allow me. Because his speech has hurt the feelings of people from other States which merged with Karnataka. Here we have come. We have been intregrated with the Mysore State and afterwards Karnataka State with certain assurances. Till today for 35 years we have been discriminated. What is our position in the administration? We have come to the stage to demand a separate State. Now a bold decision, a long pending decision to have Maland Area Development and Hyderabad Karnataka Area Development Boards is taken by the Chief Minister. It is an historical one. I request the hon.members from other than Maland and Hyderabad Karnatak area that they must realise and see that what is the position of the people of the area, whether they should come on par with them and proceed further. That is why I want if Mr. Vatal Nagaraj wanted to take Qumarul Islam of Hyderabad-Karnatak area, if Mr. Chandregowda is taken from Malnadu area, let out people should also come on par with you, in all the fields such as, Agriculture,Industry, Education, Economic development etc, and then we unitedly and develop proceed because this country's unity is depending upon the Unity in Diversity formula. That is why I request Mr. Vatal Nagj that he should not speak in such a way that the feeling of the people of this area is hurt. Thank you.

SRI R.L. JALAPPA : We are also elected from the people. It is our duty to protect our people. We welcome the measure but not at the cost

of our people. Simply because Maidan MLAS are not talking and keeping quiet, they cannot try to interpret in their own way.

ಉಪಾಧ್ಯಕ್ಷಿಣಿಯವರು : ಮಾನ್ಯ ವಾಟಾಳ್‌ನಾಗರಾಜ್‌ರವರೇ, ತಾವು ಮುಗಿಸಿಬಿಡಿ. ಬಹಳ ಜನ ಮಾತನಾಡಬೇಕೆಂದು ಇದ್ದಾರೆ, ಆದ್ದರಿಂದ ತಾವು ಮುಗಿಸಿಬಿಡಿ. ಈಗ ಏನು ತಿದ್ದುಪಡಿ ತಂದಿದ್ದಾರೆ, ಅದರ ಬಗ್ಗೆ ಮಾತನಾಡಿ ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತಿದ್ದೇನೆಂದರೆ, ನಿಮ್ಮ ಹೈದರಾಬಾದ್ ಕರ್ನಾಟಕವಾಗಲೀ ಅಥವಾ ಮಲೆನಾಡು ಕರ್ನಾಟಕವಾಗಲೀ, ಪ್ರಶ್ನೆ ಅಲ್ಲ ಇಲ್ಲಿ, ನಾನು ಸಮಗ್ರವಾಗಿ, ಇಡೀ ರಾಜ್ಯದ ನಾಲ್ಕೂವರೆ ಕೋಟಿ ಕನ್ನಡಿಗರ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಇವರು ಬೇಡ, ಅವರು ಬೇಡ, ಕೈ ಒಂದು ಕಡೆ, ಕಾಲು ಒಂದು ಕಡೆ ಮಾಡಿ ಮಾತನಾಡುತ್ತಾ ಇಲ್ಲ. ಸಮಗ್ರತೆ ಬಗ್ಗೆ ಹೇಳುತ್ತಿದ್ದೇನೆ. ನನಗೆ ಯಾರ ಬಗ್ಗೆಯೂ ವಿರೋಧ ಇಲ್ಲ, ತಮಗೆ ಹೇಳುತ್ತಿದ್ದೇನೆ. ಮಾನ್ಯ ಕಮರುಲ್ ಇಸ್ಲಾಂರವರು ಏನೂ ಹೇಳಬೇಕಾಗಿಲ್ಲ. ನನಗೆ ಎಲ್ಲರ ಬಗ್ಗೆಯೂ ಒಂದೇ. ನಾನು ಸಮಗ್ರವಾಗಿ ಕರ್ನಾಟಕದ ಮನುಷ್ಯ. ನನಗೆ ಇಡೀ ಕರ್ನಾಟಕದ ಬಗ್ಗೆ, ಇಡೀ ಕರ್ನಾಟಕದ ಚಿಂತನೆ ಬಗ್ಗೆ ಹೇಳುವವನು. ನನಗೆ ಕರ್ನಾಟಕದ 20ಜಿಲ್ಲೆಗಳೂ ಒಂದೇ, ನಾವೆಲ್ಲಾ ಒಂದೇ ತಾಯಿಯ ಮಕ್ಕಳು, ನಮ್ಮದು ಒಂದೇ ಉಸಿರು, ಒಂದೇ ನಾಡು ಎಂದೆತಕ್ಕಂಥ ಶಕ್ತಿ ಬರತಕ್ಕ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಗಡಿನಾಡು ಪ್ರದೇಶದ ಅಭಿವೃದ್ಧಿ ಬಗ್ಗೆ ಹೇಳಿದ್ದೇನೆ. ನಾನೇ ಮೊದಲು ಹೇಳಿದ್ದೇನೆ. ಗಡಿನಾಡಿಗೆ 33-35 ತಾಲ್ಲೂಕುಗಳನ್ನು ಸೇರಿಸಿದ್ದಾರೆ, ಇದರ ಉದ್ದೇಶ ಏನು? ನಾನು, ನನ್ನ ಒಂದು ತಾಲ್ಲೂಕನ್ನು ಸೇರಿಸಬೇಕೆಂದು ಹೇಳಲಿಲ್ಲ. ಇಡೀ ಕರ್ನಾಟಕದ, ಸಮಗ್ರ ಗಡಿ ತಾಲ್ಲೂಕುಗಳು ಬೆಳವಣಿಗೆಯಾಗಬೇಕೆಂದು ಹೇಳಿದ್ದೇನೆ. ಈವತ್ತು ಮುಖ್ಯಮಂತ್ರಿಗಳ ಹತ್ತಿರ, ನೀವೇನು 10 ಕೋಟಿ ಕೊಟ್ಟಿದ್ದೀರಿ, ಅದು ಸಾಕಾಗುವುದಿಲ್ಲ. 15 ಕೋಟಿ, 20 ಕೋಟಿ ಕೊಡಬೇಕೆಂದು ಹೇಳಿದೆ. ಬೆಳಗಾಂ ಬಗ್ಗೆ ನನ್ನ ಕೊನೆಯ ಒಂದು ತೊಟ್ಟು ರಕ್ತ ಇರುವವರೆಗೂ ಬೆಳಗಾಂ ಬಿಡುವುದಿಲ್ಲ. ಅಂದರೆ, ಬೆಳಗಾಂ ಯಾರದು, ನಾನು ಇಲ್ಲಿದ್ದೇವೆ, ನೀವು ಬೆಳಗಾಂನಲ್ಲಿದ್ದೀರಿ ಎಂದು ಹೇಳಿದರೆ ಸರಿಹೋಗುತ್ತದೆಯೇ? ನಾನು ಸಮಗ್ರವಾಗಿ, ಕರ್ನಾಟಕ ರಾಜ್ಯದ ಬಗ್ಗೆ ಚಿಂತನೆ ಮಾಡತಕ್ಕವನು. ಅದರ ಬಗ್ಗೆ ಏನೂ ಇಲ್ಲ. ನಾನು ತಮಗೆ ಬಗ್ಗೆ ಹೇಳುತ್ತೇನೆ. ನಾನು ಆ ಕಡೆಯ ಸದಸ್ಯರಿಗೆ ಏನೂ ಹೇಳಲಿಲ್ಲ. ಅವರಿಗೆ ರಾಜ್ಯದ ಅಭಿವೃದ್ಧಿ ಬಗ್ಗೆ ಆಸಕ್ತಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಚಂದ್ರೇಗೌಡರು ಏನು ಬೇಕಾದರೂ ಹೇಳಲಿ, ಅವರು ನಮ್ಮ ವಿರೋಧಪಕ್ಷದ ನಾಯಕರಾಗಿದ್ದೀರಿ, ಅವರ ನಾಯಕತ್ವದಲ್ಲಿ ನಾನು ಸ್ವಲ್ಪ ನಂಬಿಕೆ ಇಟ್ಟುಕೊಂಡಿದ್ದೇನೆ.

ಉಪಾಧ್ಯಕ್ಷಿಣಿಯವರು : ಆಯಿತು, ತಾವು ಮುಗಿಸಿ, ಬಹಳ ಜನ ಮಾತನಾಡಬೇಕೆಂದು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುವುದಕ್ಕೆ ನಿಂತಿದ್ದನೆಂದರೆ, ನೀವು ಆ ಭಾಗದ ಅಭಿವೃದ್ಧಿಗೆ ಎಷ್ಟು ಕೋಟಿ ರೂಪಾಯಿಗಳನ್ನಾದರೂ ಕೊಡಿ, ನನಗೆ ಯಾರ ಬಗ್ಗೆಯೂ ವಿರೋಧ ಇಲ್ಲ. ನಾವು ಈ ನಾಡು ಒಂದೇ ಎನ್ನತಕ್ಕ ತೀರ್ಮಾನಕ್ಕೆ ಬರಬೇಕು. ಎರಡನೆಯದು, ತಮಗೆ ಹೇಳುತ್ತೇನೆ, ನಾನು

ಸಹ ಕೇಳುತ್ತೇನೆ. ನನ್ನನ್ನು ಬಿಟ್ಟಿದ್ದೀರಿ, ನಾವೇನು ಅನ್ಯಾಯ ಮಾಡಿದ್ದೇವೆಂದು ಹೇಳಿ. ಚಾಮರಾಜನಗರ, ಕೊಳ್ಳೆಗಾಲ ಇಡೀ ರಾಜ್ಯದಲ್ಲಿ ಕಾಡು ಇದ್ದಹಾಗೆ ಇದೆ. ಇವತ್ತು ಕೇಳುವವರೇ ಗತಿ ಇಲ್ಲ, ಚಾಮರಾಜನಗರವನ್ನು ಕೇಳುವವರೇ ಗತಿ ಇಲ್ಲ, ತಾವು ಈ ರಾಜ್ಯದಲ್ಲಿ ಹಿಂದುಳಿದವರು ಎನ್ನತಕ್ಕಂಥ ಪಟ್ಟಿಯನ್ನು ಹಾಕಿಕೊಂಡಿದ್ದೀರಿ. ಅಲ್ಲಿ ಉಪ್ಪಾರ ಜನಾಂಗ ಇದ್ದಾರೆ, ಪರಿವಾರ ಜನಾಂಗ ಇದ್ದಾರೆ. ಆ ಜನ ಇವತ್ತು ಕಾಲ ಕಸಕ್ಕಿಂತ ಕಡಿಮೆಯಾಗಿದ್ದಾರೆ. ಆ ಜನರನ್ನು ಕೇಳುವವರು ಗತಿ ಇಲ್ಲ, ಚಾಮರಾಜನಗರ ಕೊಳ್ಳೆಗಾಲದ ಕಡೆ ಇರುವ ಉಪ್ಪಾರ ಜನಾಂಗ ಮತ್ತು ನಾಯಕ ಜನಾಂಗದವರನ್ನು ನೀವೂ ನೋಡಿದ್ದೀರಿ, ಅವರ ಪರಿಸ್ಥಿತಿ ಏನಿದೆ ಎಂದು ನೋಡಿದ್ದೀರಿ. ನಾನೂ ಕೂಡ ನಿಮ್ಮಲ್ಲಿ ಯಾಚನೆ ಮಾಡುತ್ತಿದ್ದೇನೆ, ಭಿಕ್ಷೆ ಕೇಳುತ್ತಿದ್ದೇನೆ, ನಿಮ್ಮ ಮಂಡಳಿಗೆ ನಮ್ಮನ್ನೂ ಸೇರಿಸಿಕೊಂಡು ಬಿಡಿ. ಆದರೆ ನೀವು ನಮ್ಮನ್ನು ಬಿಟ್ಟು ಬಿಟ್ಟಿರಿ. ಇಲ್ಲಿ ಒಂದೊಂದು ಗುಂಪಿದೆ. ಆ ಕಡೆ ಹೈದರಾಬಾದ್ ಕರ್ನಾಟಕದವರದ್ದು ಒಂದು ಗುಂಪು. ಈ ಕಡೆ ಮಲೆನಾಡಿನವರದ್ದು ಒಂದು ಗುಂಪು, ಈ ಸಭೆಯಲ್ಲಿ ನೀವು ಗುಂಪು ಮಾಡುತ್ತೀರಾ, ಇದನ್ನು ಈ ಸಭೆಯಲ್ಲಿ ಹೇಳುವುದಕ್ಕೆ ನಮಗೆ ಅಧಿಕಾರ ಇದೆ. ಈ ಸಭೆಯಲ್ಲಿ ಕರ್ನಾಟಕವನ್ನು ಬೇರೆ ರೀತಿಯಿಂದ ತೆಗೆದುಕೊಂಡು ಹೋಗುವುದಕ್ಕೆ ನಾನು ತಯಾರಾಗಿಲ್ಲ. ಇಡೀ ಕನ್ನಡ ನಾಡು ಒಂದೇ ಎಂಬ ಮಾತನ್ನು ಹೇಳಿ, ನಮ್ಮ ಚಾಮರಾಜನಗರ ಮತ್ತು ಕೊಳ್ಳೆಗಾಲದಂಥ ಹಿಂದುಳಿದ ಪ್ರದೇಶಗಳನ್ನು ಇದಕ್ಕೆ ಸೇರಿಸಿಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ಮಲೆನಾಡು ಏರಿಯಾ ಡೆವಲಪ್ ಮೆಂಟ್ ಬೋರ್ಡ್ ತಂದಿರುವುದಕ್ಕಾಗಿ ಸರಕಾರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಹಿಂದೆ ತಾವು ವಿದ್ಯಾ ಮಂತ್ರಿಗಳಾಗಿದ್ದಾಗ ನನ್ನ ಕ್ಷೇತ್ರಕ್ಕೆ ಬಂದಿದ್ದಿರಿ. ನಮ್ಮ ಕ್ಷೇತ್ರದ ಪಕ್ಷವನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ನೀವು ಮೂಡಿಗೆರೆಯಿಂದ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೋಗಬೇಕಾದರೆ ಸರಿಯಾದ ಸಾರಿಗೆ ಸಂಪರ್ಕ ಇಲ್ಲದೆ 5 ಕಿಲೋಮಿಟರ್ ಮಳೆಯಲ್ಲಿ ನೆದುಕೊಂಡು ನಡೆದಿದ್ದು ನಿಮಗೆ ಜ್ಞಾಪಕ ಇರಬಹುದು. ನಮ್ಮಲ್ಲಿ ಅಂತಹ ಪರಿಸ್ಥಿತಿ ಇದೆ. ಮಾನ್ಯ ನಾಗರಾಜ್ ರವರು ಇಂತಹ ವಿಶೇಷ ಸೌಲಭ್ಯ ಏತಕ್ಕೆ ಎಂದು ಹೇಳುತ್ತಿದ್ದಾರೆ. ಅವತ್ತು ನಾನು ಐದು ಕಿಲೋಮಿಟರ್ ಅದೂ ಮಳೆಯಲ್ಲಿ ನೆದುಕೊಂಡು ನೆಡೆದುಕೊಂಡು ಹೋಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಆ ರೀತಿ ಹೇಳಲಿಲ್ಲ, ತೆಗೆದುನೋಡಿರಿ, ನಿಮಗೆ ಕೊಡಬಾರದು ಎಂಬ ವಿಚಾರ ಇಲ್ಲ ನಿಮಗೆ ಕೊಟ್ಟ ಬಗ್ಗೆ ನನಗೆ ಚಿಂತೆ ಇಲ್ಲ ನನ್ನ ವಿಚಾರ ಬೇರೆ. ನಿಮಗೆ ಕೊಡಬೇಡಿರಿ ಎಂದು ನಾನು ಹೇಳಲಿಲ್ಲ, ಸರಕಾರವನ್ನೇ ತೆಗೆದುಕೊಂಡು ಹೋಗಿ ಅಲ್ಲಿಟ್ಟು ಕೊಳ್ಳಿ, ಬೇಡ ಎಂದವರು ಯಾರು ?

(ಗೊಂದಲ)

ಶ್ರೀಮತಿ ಮೋಟಮ್ಮ : ಇಂತಹ ಪರಿಸ್ಥಿತಿಯಲ್ಲಿ....

ಶ್ರೀ ಡಿ.ಎ. ಚಿನ್ನಪ್ಪ : ಚಾಮರಾಜ ನಗರಕ್ಕೆ ಕುಡಿಯುವನೀರಿನ ಸರಬರಾಜಿಗೆ ಎಷ್ಟೋ ಕೋಟಿ ರೂಪಾಯಿನ ಯೋಜನೆಯನ್ನು ಶಂಕುಸ್ಥಾಪನೆ ಮಾಡಿಸಿದರಲ್ಲಾ, ಆಗ ನಿಮ್ಮ ಸಮಾಜವಾದ ಎಲ್ಲಿಗೆ ಹೋಗಿತ್ತು?

ಶ್ರೀ ವಾಟಾಳ್ ನಾಗರಾಜ್ : ಒಂದು ವಿಷಯ ದಯವಿಟ್ಟು ತಿಳಿದುಕೊಳ್ಳಿ. ಶಂಕುಸ್ಥಾಪನೆಯನ್ನು ಮಾಡಿದರು. ಇನ್ನೂ ಒಂದು ಬುರುಡೇನೂ ಕಟ್ಟುವುದಕ್ಕೆ ಆಗಿಲ್ಲ, ಏನು ಕೊಟ್ಟುಬಿಟ್ಟಿದ್ದಾರೆ?

ಶ್ರೀಮತಿ ಮೋಟಮ್ಮ : ಆವತ್ತು ಸಿಕ್ಕಾಪಟ್ಟೆ ಮಳೆಬರುತ್ತಿತ್ತು. ನೀವು ಬೆಳಗಿನ ಜಾವ ಆ ಕಡೆಯಿಂದ ಬರುವುದಕ್ಕೆ ಆಗದೆ. ತಿರುಗಿ ಮಂಗಳೂರಿಗೆ ಹೋಗಿ ಉಪ್ಪಿನಂಗಡಿ ಮೂಲಕ ಬೆಂಗಳೂರಿಗೆ ಬರಬೇಕಾಯಿತು. ಆವತ್ತು ತಮ್ಮ ಇಲಾಖೆಯ ಡಿಮ್ಯಾಂಡ್ ಡಿಸ್ಕಷನ್‌ಗೆ, ಅಥವಾ ಪಾಸಾಗಲಿಕ್ಕೆ ಇತ್ತು ಎಂಬು ಕಾಣಿಸುತ್ತದೆ. ಆವತ್ತು ಬೆಳಗಿನ ಜಾವ ನಾಲ್ಕು ಘಂಟೆಗೆ ನಾವು ಬಂದೆವು. ಇವತ್ತು ಇಂತಹ ಪರಿಸ್ಥಿತಿ ಮಲೆನಾಡಿನಲ್ಲಿದೆ. ಇವತ್ತು ಕವಿಗಳು ಬಹಳ ಚೆನ್ನಾಗಿ ವರ್ಣನೆ ಮಾಡುತ್ತಾರೆ. ಅಲ್ಲಿ ಜನ ಚೆನ್ನಾಗಿದ್ದಾರೆ, ಅಲ್ಲಿ ಜೋಗದ ಜಲಪಾತ ಇದೆ, ಹಿಲ್‌ಸ್ಟೇಷನ್ ಆದ ಕೆಮ್ಮಣ್ಣು ಗುಂಡಿ ಇದೆ, ಕುದುರೆ ಮುಖ ಇದೆ. ಎಲ್ಲಾಬಹಳ ಚೆನ್ನಾಗಿ ಇದೆ ಎಂದು ತಮ್ಮ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬರುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಇವತ್ತು ಜೋಗದ ಜಲಪಾತವಾಗಲೀ, ಕೆಮ್ಮಣ್ಣುಗುಂಡಿಯಾಗಲೀ, ಯಾರ ಸ್ವತ್ತೂ ಅಲ್ಲ. ಅದು ಕನ್ನಡಿಗರ ಸ್ವತ್ತು-ಸಮಗ್ರ ಕನ್ನಡಿಗರ ಸ್ವತ್ತು.

ಉಪಾಧ್ಯಕ್ಷಿಣಿಯವರು : ಅವರು ಏನೋ ಹೇಳುತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳದೇ ಇರುವುದನ್ನು ಮಾನ್ಯ ವಾಟಾಳ್ ನಾಗರಾಜ್ ಹೇಳಿದರು ಎಂದು ಹೇಳುತ್ತಿದ್ದಾರೆ. ಇವರಿಗೆ ಕನಿಷ್ಠ ನೂರು ಕೋಟಿ ರೂಪಾಯಿ ಕೊಡಿ. ಯಾರು ಬೇಡ ಎನ್ನುತ್ತಾರೆ.

ಶ್ರೀಮತಿ ಮೋಟಮ್ಮ : ನೀವು ಮಾತನಾಡುವಾಗ ನಾನು ಕೇಳಿಕೊಂಡು ಕುಳಿತಿದ್ದೆ. ನೀವು ಮಾತನಾಡಿರುವುದರ ಬಗ್ಗೆ ನಾನು ಮಾತನಾಡಿಲ್ಲ. ಆದುದರಿಂದ ದಯವಿಟ್ಟು ಅವಕಾಶ ಕೊಡಿ. "ನೋಡ ಬಾ, ನೋಡು ಬಾ, ಕಣ್ಣಾರೆ ನೋಡುಬಾ ನಮ್ಮೂರ" ಎಂದು ಹೇಳಿ ನಮ್ಮ ಸ್ನೇಹಿತರನ್ನು ಕರೆಯುವಷ್ಟು ನಮ್ಮ ಊರು ಸುಂದರವಾಗಿದೆ. ಅಲ್ಲಿನ ಜನರ ದುರಂತ ನೋಡಿದರೆ ಅಲ್ಲಿಗೆ ಹೋಗಿ ಬಂದವರನ್ನು ಕೇಳಿದರೆ ಗೊತ್ತಾಗುತ್ತದೆ. ಐಲ್ಯಾಂಡ್ ಟೈಪ್ ಇರತಕ್ಕಂಥ ಕುಗ್ರಾಮಗಳಲ್ಲಿರುವಂತಹ ಜನರಿಗೆ ರಸ್ತೆ ಇಲ್ಲ, ಸೇತುವೆಗಳು ಇಲ್ಲ, ಒಂದು ಊರಿನಿಂದ ಇನ್ನೊಂದು ಊರಿಗೆ ಮಳೆಗಾಲದಲ್ಲಿ ಹಳ್ಳಿಯ ಹೆಂಗಸರು, ಗದ್ದೆ ನಾಟಿಗೋ, ಕಾಫಿತೋಟದ ಕೆಲಸಕ್ಕೋ ಹೋಗಬೇಕಾದರೆ ಹೊಳೆ ಉಕ್ಕಿ ಬರುವುದು ಗೊತ್ತಾಗದೇ, ಹೊಳೆ ದಾಟುತ್ತಾ ಇರುವಾಗ ಒಂದೊಂದು ವರ್ಷಕ್ಕೆ ಏನಿಲ್ಲ ಎಂದರೂ 8-10 ಜನ ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ. ಅಂತಹ ಪರಿಸ್ಥಿತಿ ಇದೆ. ಹೀಗಿರಬೇಕಾದರೆ ಮಲೆನಾಡು ಅಭಿವೃದ್ಧಿಗೆ ವಿಶೇಷವಾಗಿ ಸರಕಾರ ಗಮನ ಹರಿಸುವುದರಲ್ಲಿ ತಪ್ಪು ಇದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ತಾವು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ಅವರಿಗೆ ಕೊಡಬೇಡಿರಿ ಎಂದು ಯಾರೂ ಹೇಳಿಲ್ಲ, ಅವರೂ ಹೇಳಿಲ್ಲ, ನಾವೂ ಹೇಳಿಲ್ಲ, ಅದನ್ನು ವೆಲ್‌ಕಮ್ ಮಾಡಿರುತ್ತೇವೆ.

(ಗೊಂದಲ)

ಶ್ರೀಮತಿ ಮೋಟಮ್ಮ : ಮಾನ್ಯ ಜಾಲಪ್ಪನವರೇ, ನೀವು ಮಾತನಾಡಿದ್ದುದು ತಪ್ಪು ಎಂದು ನಾನು ಹೇಳುತ್ತಿಲ್ಲ, ನಿಮ್ಮ ಬಗ್ಗೆ ನನಗೆ ಸಾಕಷ್ಟು ಗೌರವ ಇದೆ. ನಮ್ಮ ಊರಿನ ಜನರ ಪರಿಸ್ಥಿತಿ. ದುರಂತ ಏನಿದೆ. ಅದನ್ನು ದೃಷ್ಟಿಯಲ್ಲಿಟ್ಟು ಕೊಂಡು ನಾನು ಮಾತನಾಡುತ್ತಿದ್ದೇನೆ. ನಾವು ಹೆಣ್ಣು ಮಕ್ಕಳು ಮಾತನಾಡುವುದೇ ಅಪರೂಪ, ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷಿಣಿಯವರೇ, ಏನಾಗಿದೆ ಇದೊಂದು ನಾವು ಹೊಸದಾಗಿ ಏನೋ ಮಾಡುತ್ತಿದ್ದೇವೆ ಎಂದು ಒಂದು ಭಾವನೆ ಬಂದಿದ್ದರೆ, ಅದು ಸರಿಯಲ್ಲ. ಏಕೆಂದರೆ ಇದು ನಾವು ಕಂಡುಹಿಡಿದಂತಹ ಹೊಸ ಸೂತ್ರ ಅಲ್ಲ. ನಾವು ಒಂದು ಸಾಂಸ್ಥಿಕವಾಗಿ ಶಾಸನ ಸ್ವರೂಪ ನಾವು ಕೊಟ್ಟಿದ್ದೇವೆಯೇ ಹೊರತು ಹೊಸದಾಗಿ ಹೊಸ ಯೋಜನೆಯನ್ನು ನಾವು ಮಾಡಿಲ್ಲ. ನಿಮಗೆ ಗೊತ್ತಿದೆ. ಕೇಂದ್ರ ಸರ್ಕಾರ ಇದಕ್ಕೆ ಪಶ್ಚಿಮಘಟ್ಟಗಳ ಯೋಜನೆ ಅಂತ ಹೇಳಿ ಮಲೆನಾಡು ಬಗ್ಗೆ ಯೋಜನೆ ಮಾಡಿದ್ದಾರೆ. ಅದಕ್ಕೆ ಪ್ರತ್ಯೇಕವಾದ ಹಣಕೊಟ್ಟಿದ್ದಾರೆ. ಅದಕ್ಕೆ ಈ ಹಣ ಬರುತ್ತದೆ. ಈ ಹಣ ಕೂಡ ಮಲೆನಾಡು ಬೋರ್ಡ್ ಅಂತ ಏನು ಮಾಡುತ್ತೇವೆ. ಈ ಹಣ ಕೂಡ ಉಪಯೋಗ ಮಾಡುತ್ತೇನೆ. ಈಗಾಗಲೇ ಸುಮಾರು ವರ್ಷಕ್ಕೆ ಕಳೆದ ಸಾರಿ 8 ಕೋಟಿ 10 ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಇದೇನು ಹೊಸದು ಅಲ್ಲ 10 ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಇದು ಬಹುಶಃ ಸಾಂಸ್ಥಿಕವಾಗಿ ಶಾಸನ ಸ್ವರೂಪ ಇದನ್ನು ಮಾಡಿ ಇನ್ನು ಒಂದು 10 ಕೋಟಿ ರೂಪಾಯಿಗಳನ್ನು ಕೊಡಿ ಅಂತ ಹೇಳಿ ಯೋಜನಾ ಆಯೋಗದಲ್ಲಿ ಕೇಳಿದರೆ ನಮಗೆ ಇನ್ನು ಒಂದು ಹೆಚ್ಚು ಶಕ್ತಿ ಬರುತ್ತದೆ. ಪಶ್ಚಿಮಘಟ್ಟಗಳ ಯೋಜನೆಯಲ್ಲಿ 18 ತಾಲ್ಲೂಕುಗಳನ್ನು ಸೇರಿಸಿಕೊಳ್ಳಲು ಎಲ್ಲಾ ಅರ್ಹತೆಗಳು ಇವೆ. ಅದಕ್ಕೆ ಯೋಜನಾ ಆಯೋಗದ ಒಂದು ಮಾರ್ಗದರ್ಶನ ಕೊಟ್ಟಿದ್ದಾರೆ. ಗೈಡ್‌ಲೈನ್ಸ್ ಪ್ರಕಾರ ಇನ್ನೂ 18 ತಾಲ್ಲೂಕುಗಳನ್ನು ಸೇರಿಸಬೇಕೆಂದು ನಾವು ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಈ ಪಶ್ಚಿಮಘಟ್ಟಗಳ ಯೋಜನೆಯಲ್ಲಿ ಸೇರಿಸತಕ್ಕಂಥ ತಾಲ್ಲೂಕುಗಳು, ಬಹುಶಃ ಈ 18 ತಾಲ್ಲೂಕುಗಳು ಅರ್ಹತೆ ಇರತಕ್ಕ ತಾಲ್ಲೂಕುಗಳು, ಇವುಗಳು ಪಶ್ಚಿಮಘಟ್ಟ ಯೋಜನೆಯಲ್ಲಿ ಸೇರಿವೆ. ಈಗ ಈ ಎರಡನ್ನೂ ಸೇರಿಸಿದಾಗ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಮಲೆನಾಡಿಗೆ ಪ್ರತ್ಯೇಕವಾದ ಪ್ರಶ್ನೆ ಬರುವುದಿಲ್ಲ, ಕೇಂದ್ರ ಸರ್ಕಾರದಿಂದ ಬರತಕ್ಕಂಥ 10 ಕೋಟಿರೂಪಾಯಿಗಳು ಜೊತೆಗೆ ನಾವು ಇನ್ನೂ ಒಂದು 10 ಕೋಟಿ ರೂಪಾಯಿಗಳನ್ನು ಕೊಡಿ ಎಂದು ನಾವು ಒತ್ತಾಯ ಮಾಡಿದರೆ ಇನ್ನು ಒಂದು 10-20 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಒಳ್ಳೆಯದು. ಹೈದ್ರಾಬಾದ್ ಕರ್ನಾಟಕಕ್ಕೆ ಈಗ ಪ್ರತ್ಯೇಕ ಹಣ ಇಲ್ಲ, ಇದು ಔಟ್ ಸೈಡ್‌ದಿ ಪ್ಲಾನ್‌ಕೊಡತಕ್ಕದ್ದು, ಈ ಪಶ್ಚಿಮಘಟ್ಟಗಳ ಯೋಜನೆಯಲ್ಲಿ ಏನು 10 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಔಟ್‌ಸೈಡ್‌ದಿಪ್ಲಾನ್ ಕೊಟ್ಟಿರತಕ್ಕಂಥಾದ್ದು. ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದು ಇನ್‌ಸೈಡ್ ದಿ ಪ್ಲಾನ್. ಇದರಲ್ಲಿ

ನಮಗೆ 10 ಕೋಟಿ ರೂಪಾಯಿಗಳು ಹೆಚ್ಚು ಸಿಗುತ್ತದೆ. ಇನ್ನೂ 10-20 ಕೋಟಿ ರೂಪಾಯಿಗಳನ್ನು ಕೊಡಿ ಅಂತ ಹೇಳಿ ಸರಿಯಾದ ಮಾಸ್ಟರ್ ಪ್ಲಾನ್ ಮಾಡಿ ಬ್ಲೂಪ್ರಿಂಟ್ ಮಾಡಿ ಇಂತಹ ಯೋಜನೆಗಳನ್ನು ಜಾರಿಗೆ ತಂದರೆ ನಮಗೆ ಹೆಚ್ಚು ಹಣ ಸಿಗುತ್ತದೆ. Man must appreciate that ಹೀಗಿರುವಾಗ ನಾವು ಬಹುಶಃ ನಾವು ಇದನ್ನು ಪ್ರತ್ಯೇಕ ದೃಷ್ಟಿಯಿಂದ ನೋಡದೆ ಎಲ್ಲಾ ಸಮಗ್ರವಾದ ಕರ್ನಾಟಕ ದಷ್ಟಪುಷ್ಟವಾಗಿ ಸರ್ವಾಂಗೀಣವಾಗಿ ಬೆಳೆಯಬೇಕು ಎಂಬ ದೃಷ್ಟಿಯಿಂದ ನೋಡಬೇಕು.ಇದು ಎಲ್ಲರ ಇಚ್ಛೆ. ಮಾನ್ಯ ವಾಟಾಳ್‌ನಾಗರಾಜ್‌ರವರ ಇಚ್ಛೆ ಕೂಡ ಅದೇ ಆಗಿದೆ. ಮಲೆನಾಡು ಸುಂದರವಾಗಿ ಇರಬೇಕಾಗುತ್ತದೆ ಬಯಲು ಸೀಮೆ ಸುಂದರವಾಗಿ ಇರಬೇಕಾಗುತ್ತದೆ ಹೈದ್ರಾಬಾದ್ ಕರ್ನಾಟಕ ಕೂಡ ಸರ್ವಾಂಗೀಣ ಸುಂದರವಾಗಿ ಬೆಳೆಯಬೇಕು. ಅದಕ್ಕೆ ನಿರ್ದಿಷ್ಟವಾದಂತಹ ಸಮಸ್ಯೆಗಳು ಕೆಲವು ಭಾಗಗಳಲ್ಲಿ ಇವೆ. ಅಲ್ಲೂ ಅಭಿವೃದ್ಧಿಯಾಬೇಕು. ಇಂಟಿಗ್ರೇಷನ್ ಅಥವಾ ಸಮಗ್ರತೆ ಅಂದರೆ ಏನು? ನಿರ್ದಿಷ್ಟವಾಗಿ ಇರತಕ್ಕ ಸಮಸ್ಯೆಗಳನ್ನು ಗುರುತಿಸಿ ಆ ನಿರ್ದಿಷ್ಟವಾದ ಯೋಜನೆಗಳನ್ನು ಅಲ್ಲಿ ಅನ್ವಯ ಮಾಡಿದಾಗ ಮಾತ್ರ ಆ ಯೋಜನೆಗಳು ಪರಿಪಕ್ವವಾಗಿ ಪರಿಪೂರ್ಣವಾಗಿ ಆಗುತ್ತದೆ. ಎಲ್ಲರಿಗೂ ಒಂದೇ ಟ್ರೀಟ್‌ಮೆಂಟ್ ಕೊಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರೋಗ ಇರುತ್ತದೆ. ಅದಕ್ಕೆ ತಕ್ಕ ಟ್ರೀಟ್‌ಮೆಂಟ್ ಕೊಡಬೇಕೇ ಹೊರತು ಅನ್ಯತಾ ಅಲ್ಲ. ತಮಗೆ ಗೊತ್ತಿದೆ ಒಬ್ಬ ಸುಂದರವಾದ ತರುಣಿ ಇದ್ದಾಳೆ. ಎಲ್ಲರಿಗೂ ಒಂದೇ ರೀತಿಯ ಅಲಂಕಾರ ಮಾಡುವುದುಕ್ಕಾಗುತ್ತದೆಯೇ? ಒಬ್ಬೊಬ್ಬರಿಗೆ ಒಂದೊಂದು ರೀತಿಯ ಅಲಂಕಾರ ಮಾಡಿದರೆ ಚೆನ್ನಾಗಿ ಕಾಣುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಚೆಂದ ಕಣ್ಣು ಕುರುಡಿ ಅಂತ ಗಾದೆ ಒಂದು ಇದೆ.

ಶ್ರೀಮತಿ ಮೊಟಮ್ಮ : ನಾನಾದರೂ ಇಷ್ಟೇ ಹೇಳುತ್ತೇನೆ, ಮಾನ್ಯ ಅಧ್ಯಕ್ಷಣಿಯವರೇ, ತಮಗೆ ಗೊತ್ತಿದೆ. ನಮ್ಮ ದುರಾದೃಷ್ಟ ಇನ್ನೊಂದು ಅಂತ ಹೇಳುವುದಾದರೆ ನಮ್ಮಲ್ಲಿ ಇವತ್ತು ಸುಮಾರು ಆಸ್ಪತ್ರೆಗಳು ಇದ್ದರೂ ಡಾಕ್ಟರ್ಸ್‌ಗೆ ಇಲ್ಲ. ಜೊತೆಗೆ ಉಪಾಧ್ಯಾಯರುಗಳು ಇಲ್ಲ. ಬಹಳಕಷ್ಟದ ಪರಿಸ್ಥಿತಿ ಅಲ್ಲಿದೆ. ಏಕೆಂದರೆ ಡಾಕ್ಟರ್ಸ್‌ಗೆ ಇಲ್ಲ. ಜೊತೆಗೆ ಉಪಾಧ್ಯಾಯರುಗಳು ಇಲ್ಲ. ಬಹಳ ಕಷ್ಟದ ಪರಿಸ್ಥಿತಿ ಅಲ್ಲಿದೆ. ಏಕೆಂದರೆ ಡಾಕ್ಟರ್ಸ್‌ಗೆ ಕ್ವಾರ್ಟಸ್‌ಗಳು ಇಲ್ಲ. ನಮ್ಮಲ್ಲಿ ಡಾಕ್ಟರ್ಸ್‌ಗಳು ಮೂಲೆಯಲ್ಲಿರುವ ಸ್ಪೆಷಲ್ ಆಗಿ ಮಲೆನಾಡಿಗೆ ಹೆಚ್ಚು ರಸ್ತೆಗಳನ್ನು ಕುಡಿಯುವ ನೀರಿನ ವ್ಯವಸ್ಥೆ ಈ ಅಭಿವೃದ್ಧಿ ಮಂಡಲಿ ಮೂಲಕ ಮಾಡಬೇಕಾಗುತ್ತದೆ. ಇದು ನಿಜವಾಗಿಯೂ ಶ್ಲಾಘನೀಯವಾದ ವಿಷಯ. ಕುಡಿಯುವ ನೀರಿನ ಬಗ್ಗೆ ಹೇಳಬೇಕಾದರೆ, ಇವತ್ತು ನಮ್ಮ ಕಡೆ ಒಂದೊಂದು ಹಳ್ಳಿಯಲ್ಲಿ 7-8 ಬೋರ್‌ವೆಲ್‌ಗಳನ್ನು ಕೊರೆದರೂ ಸಹ ನೀರು ಸಿಗುವುದಿಲ್ಲ. ಮಲೆನಾಡಿನಲ್ಲಿ ಮಳೆ ಸುರಿಯುತ್ತಿದ್ದರೂ ನಮ್ಮ ದುರಾದೃಷ್ಟ ನೋಡಿ. ಸಮುದ್ರದ ಒಡೆತನ ಉಪ್ಪಿಗೆ ಬಡತನ ಎನ್ನುವ ಪರಿಸ್ಥಿತಿ ನಮ್ಮದು. ನಮ್ಮಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಝರಿ ಹರಿಯುತ್ತದೆ. ಹಳ್ಳಗಳು ಹರಿಯುತ್ತವೆ. ಆದರಿಂದ ನಾವು ಬಾವಿ ತೋಡಿಸಿ ಪೈಪ್ಡ್ ವಾಟರ್ ಹಳ್ಳಿಗಳಿಗೆ ಕೊಡಬೇಕಾಗುತ್ತದೆ. ಇದರ ಜೊತೆಗೆ ತಮಗೆಲ್ಲಾಗೊತ್ತಿರುವ ಹಾಗೆ ಸಮಸ್ಯಾತ್ಮಕ ಹಳ್ಳಿಗಳು ನಮ್ಮಲ್ಲಿವೆ. ಅಲ್ಲಿ ಒಂದು ಹಳ್ಳಿಗೆ 10-20 ಮನೆಗಳು ಮಾತ್ರ ಇರುತ್ತದೆ. ಇನ್ನೊಂದು ಕಡೆ 5 ಮನೆಗಳು ಇರುತ್ತವೆ. ಆ ಜನಗಳಿಗೂ ಕೂಡ ನಾವು ನೀರು ಕೊಡಬೇಕು. ಅವರಿಗೂ

ಕೂಡ ರಸ್ತೆ ಒದಗಿಸಬೇಕು. ನೋಡಿ ನಮ್ಮ ಪರಿಸ್ಥಿತಿ ಹೀಗಿದೆ. ಈಗಾಗಲೇ ಮಲೆನಾಡು ಏರಿಯಾ ಡೆವಲಪ್‌ಮೆಂಟ್ ಸ್ಕೀಮ್‌ಗಳಲ್ಲಿ ಹೆಚ್ಚು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಮಾಡಿದರೆ ನಾವು ಕುಡಿಯುವ ನೀರಿಗೆ ಹೆಚ್ಚಿನ ಆಧ್ಯತೆ ಕೊಡಬೇಕಾಗುತ್ತದೆ. ನಮ್ಮಲ್ಲಿ ಸುಮಾರು 200 ಸಮಸ್ಯಾತ್ಮಕ ಹಳ್ಳಿಗಳು ಇವೆ. ಅಲ್ಲಿ ಬೋರ್‌ವೆಲ್ಸ್ ಇಲ್ಲ. ಬಾವಿಗಳು ಇಲ್ಲ. ಮಿನಿವಾಟರ್‌ಸಪ್ಲೈ ಸ್ಕೀಮ್ ಇಲ್ಲ ಇವತ್ತು ನಮಗೆ ಜಿಲ್ಲಾ ಪರಿಷತ್ತಿನಿಂದ ಹೆಚ್ಚು ಅಂದರೆ 2 ಮಿನಿವಾಟರ್ ಸಪ್ಲೈ ಸ್ಕಿಮ್ಸ್ ಸಿಗಬಹುದು, N.R.W ಸ್ಕೀಮ್‌ನಲ್ಲಿ ನಿಮ್ಮ ನಾರಮ್ಸ್ ಪ್ರಕಾರ ಒಂದು ಸಾವಿರ ಮನೆಗಳು ಇರಬೇಕು. ನಮ್ಮಲ್ಲಿ 100 ಮನೆಗೆ ಒಂದು ಹಳ್ಳಿ 50 ಮನೆಗಳಿಗೆ ಒಂದು ಹಳ್ಳಿ ಇರುತ್ತದೆ, ನಿಮ್ಮ ನಾರಮ್ಸ್ ಪ್ರಕಾರ ನಮಗೆ ಕುಡಿಯುವ ನೀರು ಸಿಗುವುದಿಲ್ಲ.

ಹಾಗೆ ರಸ್ತೆ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚಿನ ಗಮನವನ್ನು ಕುಡಿಯವ ನೀರಿಗೆ ರಸ್ತೆ, ಸೇತುವೆಗೆ, ಕಟ್ಟಡಗಳಿಗೆ ಈ ಮಂಡಳಿಯಲ್ಲಿ ಹಣವನ್ನು ಖರ್ಚು ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇನ್ನೊಂದು ಎಂದರೆ, ಮಲೆನಾಡಿನಿಂದ ನಾವು ಸಾಕಷ್ಟು ವರಮಾನ ಕೊಡುತ್ತಿದ್ದೇವೆ. ನಾವೇನೂ ಸರ್ಕಾರದಿಂದ ಕಬಳಿಸುತ್ತಿಲ್ಲ. ಏಲಕ್ಕಿಯಿಂದ, ಸಾಕಷ್ಟು ರೆವಿನ್ಯೂ ಬರುತ್ತಿದೆ. ಕಾಫಿಯಿಂದ ಸಾಕಷ್ಟು ಕೊಡುತ್ತಿರುತ್ತೇವೆ. ಟಿಂಬರ್‌ನಿಂದ ಸಾಕಷ್ಟು ಹಣ ಬರುತ್ತಿದೆ. ಹಾಗಿರಬೇಕಾದರೆ,ಇಷ್ಟೊಂದು ಸೌಲಭ್ಯದಿಂದ ವಂಚಿತರಾದ ದುರಾದೃಷ್ಟ ಜನರಿಗೆ ರಸ್ತೆ ಕೊಡುವುದು ತಪ್ಪು, ಅಥವಾ ಸೇತುವೆ ಕೊಡುವುದು ತಪ್ಪು, ಕಾಲು ಸೇತುವೆ ಕೊಡುವುದು ತಪ್ಪು, ವಿದ್ಯುತ್ ಒದಗಿಸುವುದು ತಪ್ಪು ಎಂದು ನಾವು ತಿಳಿದುಕೊಂಡಿದ್ದೇ ಆದರೆ, ಅದಕ್ಕಿಂಥ ಮೂರ್ಖತನ ಬೇರೆ ಇಲ್ಲವೆಂದು ತಪ್ಪು ಎಂದು ನಾವು ತಿಳಿದುಕೊಂಡಿದ್ದೇ ಆದರೆ ಅದಕ್ಕಿಂತ ಮೂರ್ಖತನ ಬೇರೆ ಇಲ್ಲವೆಂದು ನನಗನಿಸುತ್ತದೆ. ದಯಮಾಡಿ ಈ ಬಿಲ್ಲ ತಂದಿದ್ದಕ್ಕೆ ನಾನು ಸರ್ಕಾರವನ್ನು ಅಭಿನಂದಿಸಿ ನನಗೆ ಒಂದೆರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಒಂದೆರಡು ಪಾಯಿಂಟ್‌ಗಳನ್ನು ಹೇಳಿಬಿಡುತ್ತೇನೆ.

ಶ್ರೀ ಕೆ. ಕರಿಯಣ್ಣ : ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದನ್ನು ನಾನು ಬೇಡ ಅನ್ನುವುದಿಲ್ಲ. ನಮ್ಮ ತಾಲ್ಲೂಕು ಬಿಟ್ಟುಹೋಗಿದೆ. ನಮ್ಮ ತಾಲ್ಲೂಕಿನ ಬಗ್ಗೆ ರೆಕಾರ್ಡ್ ಆಗಬೇಕಾಗಿದೆ.

ಶ್ರೀ ಎಸ್.ಹೆಚ್. ಕೌಜಲಗಿ : ವೆಸ್ಟರ್ನ್ ಘಾಟ್‌ನಮ್ಮ ತಾಲ್ಲೂಕು ಇತ್ತು. ಆ ತಾಲ್ಲೂಕು ಇದ್ದದ್ದನ್ನು ಈಗ ಬಿಟ್ಟಿದ್ದಾರೆ....

ಉಪಾಧ್ಯಕ್ಷಿಣಿಯವರು : ಮಾನ್ಯ ಹನುಮೇಗೌಡರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್.ಹೆಚ್. ಕೌಜಲಗಿ : ಈ ವೆಸ್ಟನ್ನು ಘಾಟ್‌ನಲ್ಲಿ ಇದ್ದುದ್ದನ್ನು ತೆಗೆದು ಬರೇ ಖಾನಾಪುರ ಸೇರಿಸಿದ್ದೀರಿ.

ಉಪಾಧ್ಯಕ್ಷಣಿಯವರು : ನಾನು ಮಾನ್ಯ ಹನುಮೇಗೌಡರನ್ನು ಕರೆದಿದ್ದೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ನಮ್ಮ ತಾಲ್ಲೂಕನ್ನು ಏಕೆ ತೆಗೆದ್ರಿ?

ಶ್ರೀ ಕೆ.ಎಸ್. ನಾಗರತ್ನಮ್ಮ : ಕುಳಿತುಕೊಳ್ಳಿ ಈಗ, ಮಾನ್ಯ ಅಧ್ಯಕ್ಷರೆ, ಮಾನ್ಯ ವೀರಪ್ಪ ಮೊಯಿಲಿಯವರು ಎಕ್ಸಪ್ಲೈನ್ ಮಾಡಿಯಾದ ಮೇಲೆ ಎಲ್ಲಾ ವಿವರವಾಗಿ ತಿಳಿದುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಅವರು ತಿರುತಿರುಗಿ ನನ್ನದು ವೆಸ್ಟ್ರನ್ ಘಾಟ್‌ನಲ್ಲಿ ಬಿಟ್ಟುಹೋಯಿತು. ವೆಸ್ಟ್ರನ್ ಘಾಟನಲ್ಲಿ ಬಿಟ್ಟುಹೋಯಿತು. ಅಂದರೆ ಹೇಗೆ? ಅವರು ವೆಸ್ಟ್ರನ್ ಘಾಟ್‌ನಲ್ಲಿ ಏನಿದೆ ಅದನ್ನೆಲ್ಲಾ ನಾವು ಸೇರಿಸಿಕೊಳ್ಳುತ್ತೇವೆ.

ಇನ್ನೂ 7 ಡಿಸ್ಟ್ರಿಕ್ಟ್ 18 ತಾಲ್ಲೂಕುಗಳಿಗೆ ನಾವು ರೆಕಮೆಂಡ್ ಮಾಡಿದ್ದೇವೆ. ಆಮೇಲೆ ಯಾವ ಯಾವುದು ವೆಸ್ಟ್ರನ್ ಘಾಟ್‌ನಲ್ಲಿ ಬಿಟ್ಟುಹೋಗಿದೆ. ಅವುಗಳನ್ನೆಲ್ಲಾ ಸೇರಿಸಿಕೊಳ್ಳುತ್ತೇವೆಂದು ಸ್ಪಷ್ಟವಾಗಿ ಅವರು ಹೇಳಿಯಾದ ಮೇಲೆ ಬಿಟ್ಟು ಹೋಗಿದೆ. ಬಿಟ್ಟು ಹೋಗಿದೆ ಅಂದರೆ ಹೇಗೆ?

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು, ಈಗ ಸೇರಿಸಿಕೊಳ್ಳುತ್ತೇವೆಂದು ಹೇಳಿದರು. ಬಹಳ ಸಂತೋಷ. ವೆಸ್ಟ್ರನ್ ಘಾಟ್‌ನಲ್ಲಿ ಯಾವ ಯಾವ ಸ್ಕಿಮ್‌ಗಳು ಸೇರಿವೆ, ಯಾವ ಯಾವ ಹಳ್ಳಿ ಹೋಬಳಿಗಳು ಸೇರಿವೆ. ಅವೆಲ್ಲಾವನ್ನೂ ಈ ಯೋಜನೆಯಲ್ಲಿ ತರುತ್ತೇವೆಂದು ಹೇಳಿದರು. ಸಂತೋಷ. ಆದರೆ, ಈ ಬಿಲ್‌ನಲ್ಲಿ ಸೇರಿಲ್ಲ. ನಮಗೆ ಬಂದ ಅನುಮಾನ ಏನು ಎಂದರೆ, ಹಾಸನ ಜಿಲ್ಲೆಯಲ್ಲಿ ಸಕಲೇಶಪುರ ಒಂದನ್ನು ಮಾತ್ರ ಸೇರಿಸಿರುವುದರಿಂದ ನಮಗೆ ಅನುಮಾನ ಬಂದು ಕೇಳಿದೆವು. ಈಗ ಸೇರಿಸುತ್ತೇವೆಂದು ಹೇಳಿದಾಗ ಸಂತೋಷ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ತಿದ್ದುಪಡಿ ತರುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಸಂತೋಷ. ಆಮೇಲೆ ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಿಂದ ಫಾರೆಸ್ಟ್ ಡೆವಲಪ್‌ಮೆಂಟ್ 110 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಸನ ಜಿಲ್ಲೆಯನ್ನೇ ಕೈಬಿಟ್ಟಿದ್ದಾರೆ. ಫಾರೆಸ್ಟ್ ಡೆವಲಪ್‌ಮೆಂಟ್‌ಗೆ 10 ಜಿಲ್ಲೆಯನ್ನು ಸೇರಿಸಿ ಹಾಸನ ಜಿಲ್ಲೆ ಒಂದನ್ನು ಕೈಬಿಟ್ಟಿದ್ದಾರೆ. ಮಾನ್ಯ ಫಾರೆಸ್ಟ್‌ಮಿನಿಸ್ಟರ್ ಇಲ್ಲೇ ಇದ್ದಾರೆ. ದಯಮಾಡಿ ವರ್ಲ್ಡ್ ಬ್ಯಾಂಕ್ ಅಸಿಸ್ಟೆಂಟ್ಸ್‌ನಲ್ಲಿ ಹಾಸನ ಜಿಲ್ಲೆಯನ್ನು ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರಿಗೂ ಮತ್ತು ಶ್ರೀಮತಿ ನಾಗರತ್ನಮ್ಮನವರಿಗೂ ಇನ್ನೊಂದು ಸಾರಿ ವಂದಿಸಿ ವೆಸ್ಟ್ರನ್ ಘಾಟ್‌ನಲ್ಲಿ ಇದನ್ನು ಸೇರಿಸುತ್ತೇವೆಂದು ಹೇಳಿರುವುದರಿಂದ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಶ್ರೀಯುತ ಕರಿಯಣ್ಣನವರು ಮಾತನಾಡಬೇಕು.

ಶ್ರೀ ಕೆ. ರಮಾನಾಥ್ ಗೈ : ನನ್ನ ಹೆಸರನ್ನು ಕರೆಯಲಿಲ್ಲ? ಯಾರು ಮಾತನಾಡುತ್ತಾರೋ ಅವರೇ ಮಾತನಾಡಬೇಕು ಇಲ್ಲಿ.

ಶ್ರೀ ಕೆ. ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಅಧ್ಯಕ್ಷರೆ, ಈ ಮಲೆನಾಡು ಅಭಿವೃದ್ಧಿ ಬೋರ್ಡ್‌ನ್ನು ಮಾಡಿರತಕ್ಕಂಥಾದ್ದು ಬಹಳ ಸಂತೋಷ. ಈಗ ನಮ್ಮ ಮಲೆನಾಡಿನಲ್ಲಿ ಓಡಾಡಬೇಕಾದರೆ, ಮತ್ತು ಯಾರಿಗಾದರೂ ಖಾಯಿಲೆ ಎಂದರೆ, ಆರು ತಿಂಗಳು ಗಟ್ಟಲೆ ಖಾಯಿಲೆಯಾದವರನ್ನು ಒಂದು ಹಳ್ಳದಿಂದ ಈಚೆಗೆ ತರುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಜಿಲ್ಲಾಪರಿಷತ್ತಿನಲ್ಲಿ ಹಣ ಇಲ್ಲದೆ ಅನೇಕ ಸೇತುವೆಗಳನ್ನು ಕಟ್ಟಲಿಲ್ಲ, ಕ್ರಾಸ್ ವೇಗಳನ್ನು ಮಾಡಲಿಲ್ಲ, ರಸ್ತೆಗಳನ್ನು ಮಾಡಿಲ್ಲ. ಹಾಗಾಗಿ ಈ ಶಿವಮೊಗ್ಗ ಮತ್ತು ಶಿಕಾರಿಪುರಗಳಲ್ಲಿ ಬಿದ್ದಂಥ

ಮಳೆಗಿಂಥಾ ಹೆಚ್ಚು ಮಳೆ ಭದ್ರಾವತಿಯಲ್ಲಿ ಬಂದು ಹಳ್ಳಗಳು ಹರಿದು ಬಹಳ ತೊಂದರೆಯಾಗಿದೆ. ಆದ್ದರಿಂದ ಭದ್ರಾವತಿಯ ಮತ್ತು ಚೆನ್ನಗಿರಿ ತಾಲ್ಲೂಕಿನ ಕೆಲವು ಭಾಗಗಳನ್ನು ಮಲೆನಾಡು ಬೋರ್ಡ್‌ಗೆ ಸೇರಿಸಿಕೊಳ್ಳಬೇಕು. ಮತ್ತು ಹೊನ್ನಾಳಿ ತಾಲ್ಲೂಕು ತೀರ್ಥಹಳ್ಳಿ ಮತ್ತು ಶಿಕಾರಿಪುರಕ್ಕೆ ಅಟ್ಯಾಚ್ ಆಗಿದೆ. ಈ ಮೂರನ್ನೂ ಸೇರಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಂಡು ಇದನ್ನು ಸ್ವಾಗತಿಸುತ್ತಾ ಈ ಮಲೆನಾಡು ಬೋರ್ಡ್ ತಕ್ಷಣ ಆಗಬೇಕಂದು ಹೇಳಿ ನಾನು ಒತ್ತಾಯಿಸುತ್ತೇನೆ.

ಶ್ರೀ ಕೆ. ರಮಾನಾಥ್ ರೈ (ಬಂಟ್ವಾಳ) : ಮಾನ್ಯ ಉಪಾಧ್ಯಕ್ಷಿಣಿಯವರೇ, ನಮ್ಮ ಸರ್ಕಾರ ಈ ದಿವಸ ಏನು ಮಲೆನಾಡು ಅಭಿವೃದ್ಧಿ ಮಂಡಲಿ ರಚನೆ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಅದನ್ನು ಸ್ವಾಗತ ಮಾಡುತ್ತಾ ಕೆಲವಾರು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಶ್ರೀಮತಿ ಮೋಟಮ್ಮನವರು ಹೇಳಿದಂತೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶಿಷ್ಟವಾದಂತಹ ಒಂದು ವಾತಾವರಣ ಇದೆ. ಆ ಒಂದು ಜಿಲ್ಲೆಯ ಪರಿಚಯ ಇದ್ದವರಿಗೆ ಈ ವಿಷಯ ಗೊತ್ತಿದೆ. ಚದುರಿದಂತೆ ಮನೆಗಳಿದ್ದು ದೂರ ದೂರದಲ್ಲಿ ಮನೆಗಳು ಇದ್ದು, ಏನು ಹ್ಯಾಮ್ಲೆಟ್‌ನಲ್ಲಿ ಇಷ್ಟು ಜನ ಸಂಖ್ಯೆ ಇದ್ದರೆ ನಲ್ಲಿ ನೀರಿನ ಯೋಜನೆ ಮಾಡಬಹುದು, ಮಿನಿ ವಾಟರ್ ಸಪ್ಲೈ ಮಾಡಬಹುದು ಎಂದು ಸರ್ಕಾರದ ಧೋರಣೆ ಪ್ರಕಾರ ಬಹಳಷ್ಟು ಕಡೆ ನಮಗೆ ಕುಡಿಯುವ ನೀರು ಕೊಡುವುದಕ್ಕೆ ನಮಗೆ ಸಾಧ್ಯ ಆಗುತ್ತಾ ಇಲ್ಲ. ಸಂಪರ್ಕ ವ್ಯವಸ್ಥೆ ಚದುರಿದಂತೆ ಮನೆಗಳು ಇದ್ದು, ಬೆಟ್ಟ ಗುಡ್ಡಗಳು, ಹಲ್ಲೆಗಳು ಮತ್ತು ಗದ್ದೆಗಳಿಂದ ಕೂಡಿದಂತಹ ಪ್ರದೇಶ ಇವುಗಳಿಂದಾಗಿ ಸಂಪರ್ಕದ ವ್ಯವಸ್ಥೆ ಇಲ್ಲದೇ ಬಹಳಷ್ಟು ಕಡೆ ನಾವು ಬಹಳ ದೂರದವರೆಗೆ ನಡೆದುಕೊಂಡು ಹೋಗಬೇಕಾದ ಒಂದು ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ಇದರಿಂದಾಗಿ ಅನೇಕ ಅಭಿವೃದ್ಧಿ ಕೆಲಸವನ್ನು ತಾವು ಕಾಣಲಿಕ್ಕೆ ಸಾಧ್ಯ ಆಗುತ್ತಿಲ್ಲ. ಇವತ್ತು ಮಲೆನಾಡು ಪ್ರದೇಶದಲ್ಲಿ ಇದು ಸಾಧ್ಯ ಆಗುತ್ತಾ ಇಲ್ಲ. ಇವತ್ತು ನಮ್ಮ ಬಗ್ಗೆ ವಿಶೇಷವಾಗಿ ಬಹಳ ಒಳ್ಳೆಯ ಮಾತುಗಳನ್ನು ಹೇಳಬಹುದು. ಆದರೆ ಅಲ್ಲಿಯ ಕಷ್ಟವನ್ನು ಅನುಭವಿಸಿದವರಿಗೆ ಗೊತ್ತಿದೆ. ಈವತ್ತು ಬಹಳಷ್ಟು ವಿಪರೀತವಾಗಿ ಮಳೆ ಬಿದ್ದಾಗ ನಮ್ಮ ರಸ್ತೆಯ ಮಧ್ಯದಲ್ಲಿ ಕಾರಂಜಿ ತರಹ ನೀರು ಪುಟಿದೆದ್ದು. ರಸ್ತೆಯೆಲ್ಲಾ ಸಂಪೂರ್ಣವಾಗಿ ಹಾಳಾಗಿದೆ. ರಸ್ತೆಯನ್ನು ರಿಪೇರಿ ಮಾಡುವುದಕ್ಕೆ ನಮಗೆ ಬಹಳಷ್ಟು ದುಡ್ಡು ಬೇಕು. ಅಷ್ಟು ದುಡ್ಡು ಸಾಕಾಗುವುದಿಲ್ಲ. ಅದೇ ರೀತಿ ಸ್ಕೇರ್ಸಿಟಿ ಬಂದಾಗ ಮಾನ್‌ಸೂನ್ ತರ ಆದರೆ ಕುಡಿಯುವುದಕ್ಕೆ ನೀರು ಇರುವುದಿಲ್ಲ. ವಿಪರೀತ ಮಳೆ ಬಂದಾಗ ರಸ್ತೆಗಳು ಹಾಳಾಗಿ ಎಲ್ಲಾ ಶಾಲೆಗಳಲ್ಲಿನ ಗೋಡೆಗಳು ಹಾಗೂ ಎಲ್ಲಾ ಸರ್ಕಾರೀ ಕಟ್ಟಡಗಳು ಬಿದ್ದು ಹೋಗುತ್ತದೆ. ಇದರ ರಿಪೇರಿಗೆ ಹಣ ಬರುವುದಿಲ್ಲ. ರಸ್ತೆ ಹಾಳಾಗಿ ಹೊಂಡ ಬಿದ್ದು ವಾಹನ ಸಂಚಾರಕ್ಕೆ ತೊಂದರೆ ಆಗುತ್ತದೆ. ಸ್ಕೇರ್ಸಿಟಿ ಮತ್ತು ಕಲಾಮಿಟರ್ ಎರಡನ್ನೂ ಆ ಒಂದು ಪ್ರದೇಶದ ಜನ ಕಾಣುತ್ತಿದ್ದಾರೆ. ಇಂತಹ ಒಂದು ಕಷ್ಟ ಪರಿಸ್ಥಿತಿ ಇರತಕ್ಕ ಈ ಮಲೆನಾಡು ಪ್ರದೇಶಕ್ಕೆ ಈ ಒಂದು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡುವುದರ ಮೂಲಕ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಇದು ಕೇವಲ ಅಭಿವೃದ್ಧಿ ಮಂಡಲಿ ಎಂದು ಬೇರೆ ಹೆಸರಿಗೆ ಮಾತ್ರ ಆದರೆ ಸಾಲದು. ಈ ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ದುಡ್ಡು ಕೊಟ್ಟು ಈ ಒಂದು ಪ್ರದೇಶದ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಉಪಾಧ್ಯಕ್ಷಣಿಯವರೇ, ಮಲೆನಾಡು ಪ್ರದೇಶದ ಅಭಿವೃದ್ಧಿ ಮಂಡಲಿಯ ಈ ಒಂದು ಬಿಲ್ ಇದು ಸಮಗ್ರತೆಯಿಂದ ಕೂಡಿಲ್ಲ. ಇದರಲ್ಲಿ Statement of Objects and Reasons ನಲ್ಲಿ "Malnad region possess special problems in development mainly due to speculiar settlement pattern, sparce population, topography, heavy rainfall, dense forest, numerous revulets, etc.," ಹೇಳಿದ್ದಾರೆ. ಈ ಬಿಲ್ಲನ್ನು ತಯಾರು ಮಾಡಿದಂತಹವರು ಕೇಂದ್ರ ಸರ್ಕಾರದ ಏನು ಒಂದು ಮಾರ್ಗಸೂಚಿ ಕೊಟ್ಟಿದೆ. ಆ ಮಾರ್ಗಸೂಚಿ ಪ್ರಕಾರ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದ ಮಾರ್ಗಸೂಚಿಗೂ ನಮ್ಮ ಮಲೆನಾಡಿಗೂ ಇನ್ನೊಂದು ರಾಜ್ಯದ ಮಲೆನಾಡಿಗೂ ವ್ಯತ್ಯಾಸ ಇದೆ. ಇಲ್ಲಿ ಕಾಫಿ ಬೆಳೆಯತಕ್ಕ ಮಲೆನಾಡು ಇದೆ. ಈಗ ಹಾಸನಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ, ಅರಕಲಗೂಡು ತಾಲ್ಲೂಕಿನಲ್ಲಿ, ಆಲೂರು ತಾಲ್ಲೂಕಿನಲ್ಲಿ, ಕಾಫಿ ಬೆಳೆಯುತ್ತಾರೆ, ಕಾಫಿ ಬೆಳೆಯುವುದು ಮಲೆನಾಡು ಅಲ್ಲ ಎಂದು ಹೇಳುತ್ತೀರಾ? ಏಲಕ್ಕಿ ಬೆಳೆಯುತ್ತಾರೆ, ಇದು ಮಲೆನಾಡು ಅಲ್ಲ ಎಂದು ಹೇಳುತ್ತೀರಾ? ಮತ್ತೆ ಮೆಣಸು. ಈ ಬಿಲ್‌ಅನ್ನು ತಯಾರು ಮಾಡುವುದಕ್ಕಿಂತ ಮುಂಚೆ ಅವರು ಸಮಗ್ರವಾಗಿ ಯೋಚನೆ ಮಾಡಬೇಕಿತ್ತು. ಇದನ್ನು ಏಕಾಏಕಿಯಲ್ಲಿ ತಂದು ಕೊನೆಯ ಗಳಿಗೆಯಲ್ಲಿ ಇದನ್ನು ಪಾಸ್ ಮಾಡಿಸಿಕೊಂಡು ಹೋಗಬೇಕು ಅನ್ನುವ ಆತುರದಿಂದ ಮಾಡಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಶ್ರೀಮತಿ ನಾಗರತ್ನಮ್ಮನವರು ಬಹಳ ಹಿರಿಯ ಸಚಿವೆಯರು. ಅವರೂ ಮಲೆನಾಡಿನಲ್ಲಿ ಹುಟ್ಟಿದವರೇ. ಅವರೂ ಹಾಸನ ಜಿಲ್ಲೆಯಲ್ಲಿ ಹುಟ್ಟಿದವರೇ. ಅವರಿಗೆ ಇದು ಗೊತ್ತಾಗಬೇಕಿತ್ತು. ಇವೆಲ್ಲಾ ಮಲೆನಾಡು ಪ್ರದೇಶ ಎಂದು. ಆದ್ದರಿಂದ ಮಲೆನಾಡು ಅಭಿವೃದ್ಧಿ ಎಂದು ಈಗ ಈ Statement of Objects and Reasons ನಲ್ಲಿ ಹೇಳಿದರೆ ಅಷ್ಟೇ ಸಾಲದು. ಮಲೆನಾಡು ಜನರ ಜೀವನ ಮಟ್ಟ, ಜೀವನ ಸ್ಥಿತಿ ಬಹಳ ಕಷ್ಟ ಆಗಿದೆ, ಈ ಬಯಲು ಸೀಮೆಯವರು ಏನು ಮಲೆನಾಡಿಗೇ ಸ್ಪೆಷಲ್ ಆಗಿ ಕೊಡುತ್ತಾರೆ ನಮಗೆ ಇಲ್ಲ ಎಂದು ಹೇಳುತ್ತಾರೆ. ಆದರೆ ಬಯಲು ಸೀಮೆಯಲ್ಲಿರತಕ್ಕ ಜನರ ಜೀವನ ಸ್ಥಿತಿ, ಎನಿದೆ, ಜೀವನ ಮಟ್ಟ ಎಷ್ಟಿದೆ ಎಂಬುದನ್ನು ನೋಡಬೇಕು. ಯಾರೋ ಕೆಲವರು ಪ್ಲಾಂಟರ್‌ಗಳು ಅಭಿವೃದ್ಧಿ ಆಗಿರಬಹುದೇ ಹೊರತು ಮಿಕ್ಕವರು ಅಷ್ಟೇ ಕಷ್ಟದಲ್ಲಿ ಬಡತನದಲ್ಲಿ ಬದುಕುತ್ತಿದ್ದಾರೆ.

6.40 ಪಿ.ಎಂ.

ಉಳಿದವರೆಲ್ಲಾ ಕೊಚ್ಚೆ ಪ್ರದೇಶದಲ್ಲಿ ಬದುಕುವಂತ ಜೀವನ ನಡೆಸುತ್ತಿದ್ದಾರೆ. ಆದುದರಿಂದ, ಅವರ ಅಭಿವೃದ್ಧಿಯಾಗಬೇಕು. ಏತಕ್ಕೆ ಆಗಬೇಕೆಂದರೆ, 1947ನೇ ಇಸವಿಯಿಂದ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆವಿಗೂ ಮಲೆನಾಡಿನ ಸಂಪತ್ತನ್ನು ಇಡೀ ದೇಶಕ್ಕೆ ಉಪಯೋಗಿಸಿ ಕೊಂಡಿದ್ದೀರಿ. ನೀವು ಮಲೆನಾಡಿನಲ್ಲಿ ಬೆಳೆಯತಕ್ಕಂಥ ಮರ, ಕಾಫಿ, ಟೀ, ಏಲಕ್ಕಿ, ರಬ್ಬರ್ ಇವೆಲ್ಲದರ ಆದಾಯವನ್ನು ಇಡೀ ದೇಶಕ್ಕೆ ನೀವು ಹಂಚಿದ್ದೀರಿ, ಕೇವಲ ಮಲೆನಾಡು ಪ್ರದೇಶಕ್ಕೆ ಹಂಚಿಲ್ಲ. ಆದುದರಿಂದ, ಈ ಮಲೆನಾಡು ಅಭಿವೃದ್ಧಿಗೆ ಈ ವರ್ಷ ತೆಗೆದಿಟ್ಟಿರತಕ್ಕಂಥ ಹಣ ಏನೇನೂ ಸಾಲದು. ಈಗ ಬಯಲು ಸೀಮೆಗಳಲ್ಲಿ ಪ್ರತಿ ವರ್ಷ ಬರಗಾಲವಾಗುತ್ತದೆಂದು ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ. ರಸ್ತೆಗಳನ್ನು, ಸೇತುವೆಗಳನ್ನು ಮತ್ತು ಮೋರಿಗಳನ್ನು ಕಟ್ಟುತ್ತಾರೆ. ಮಲೆನಾಡಿನ ನಮ್ಮ ತಾಲ್ಲೂಕಿನಲ್ಲಿ ಒಂದೇ ದಿವಸ ಹದಿನಾಲ್ಕು ಇಂಚು ಮಳೆ ಬಂದಿದೆ. 72 ಕೆರೆ ಒಡೆದಿದೆ, 54 ರಸ್ತೆಗಳು ಹಾಳಾಗಿವೆ.

ಅದರ ಬಗ್ಗೆ ನಾನು ಮೊನ್ನೆ ತಾನೇ ಹೇಳಿದ್ದೇನೆ. ಪುನಃ ಅದನ್ನೇ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಆದುದರಿಂದ, ದಯಮಾಡಿ, ರಾಜ್ಯದ ಇತರೇ ಎಲ್ಲಾ ವಿಧಾನಸಭಾ ಸದಸ್ಯರುಗಳು ಇದಕ್ಕೆ ಬೆಂಬಲ ಕೊಡಬೇಕೆಂದು ಹೇಳುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾತನಾಡುವ ಆಸೆ ನನಗಿರಲಿಲ್ಲ. ಆದರೆ, ನಮ್ಮ ಅನೇಕ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಿರುವುದರಿಂದ ನಾನು ಕೂಡಾ ನನ್ನ ಅಭಿಪ್ರಾಯವನ್ನು ಮಂಡಿಸಬೇಕೆಂದು ಬಯಸಿದ್ದೇನೆ. ಇವೊತ್ತು ನಮ್ಮ ಸದನದಲ್ಲಿ ಬಹಳ ಮುಖ್ಯವಾದ ಎರಡು ಮಸೂದೆಗಳನ್ನು ನಮ್ಮ ರಾಜ್ಯದ ಕೆಲವು ಹಿಂದುಳಿದ ಪ್ರದೇಶಗಳೆಂದು ಹೇಳಿ, ಆ ಪ್ರದೇಶಗಳ ಅಭಿವೃದ್ಧಿಗೋಸ್ಕರ ಎಂದು ಹೇಳಿ ಎರಡು ಮಂಡಳಿಗಳನ್ನು ಮಾಡಬೇಕನ್ನುವಂತಹ ಮಸೂದೆಗಳನ್ನು ಮಾನ್ಯ ಸಚಿವರು ನಮ್ಮ ಮುಂದಿಟ್ಟಿದ್ದಾರೆ. ಈಗ ನಾವು ಮಲೆನಾಡು ಅಭಿವೃದ್ಧಿ ಪ್ರದೇಶದ ಮಸೂದೆ ಬಗ್ಗೆ ಮಾತನಾಡುತ್ತಿದ್ದೇವೆ. ಈಗ ನಾನಾದರೂ ಎರಡು ಮಸೂದೆಗಳನ್ನು ಮಾಡಬಾರದೆಂದು ಹೇಳುವುದಿಲ್ಲ. ಇದನ್ನು ಮಾಡೋಣ. ಆದರೆ, ಈ ಹಿಂದೆ ನಮ್ಮ ಕೆಲವು ಸದಸ್ಯರು ಮಾತನಾಡಿರತಕ್ಕಂಥ ಅಭಿಪ್ರಾಯಗಳನ್ನು ನೋಡಿದಾಗ, ಕೇಳಿದಾಗ ನನ್ನ ಮನಸ್ಸಿಗೆ ಬಹಳ ನೋವಾಯಿತು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ಮಾತನ್ನು ಕೇಳಬೇಕೆಂದು ನಾನು ಮಾತನಾಡುತ್ತಿದ್ದೇನೆ. ನನಗಂತೂ ಇವೊತ್ತಿನ ಚರ್ಚೆಯನ್ನು ಕೇಳಿ ನೋವಾಗಿದೆ. ಏಕೆಂದರೆ, ಈಗ ಕರ್ನಾಟಕ ರಾಜ್ಯದ ಏಕೀಕರಣ ಮಾಡಬೇಕೆಂದು ಬಹಳ ತ್ಯಾಗ, ಹೋರಾಟ ಎಲ್ಲಾ ನಡೆದಿದೆ. ನಮ್ಮ ರಾಜ್ಯಕ್ಕೆ ನಾವು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಆದಾಯ ಅಥವಾ ಹಣ, ನಮ್ಮ ಹಕ್ಕುಗಳು ಏನಿವೆ, ಆ ಹಕ್ಕುಗಳ ರಕ್ಷಣೆ ಮಾಡಿಕೊಳ್ಳುವುದರಲ್ಲಿ ನಾವೆಲ್ಲರೂ ವಿಫಲರಾಗಿದ್ದೇವೆ, ಉತ್ತರ ಭಾರತದ ಅನೇಕ ರಾಜ್ಯಗಳಿಗೆ ನಾವು ಹೋಲಿಕೆ ಮಾಡಿಕೊಂಡು ನೋಡಿದಾಗ ನಮಗೆ ಹಣ ಸಿಕ್ಕಿಲ್ಲ. ನಮಗೆ ಏನು ಸಿಗಬೇಕಾಗಿತ್ತು, ಅದು ಸಿಕ್ಕಿಲ್ಲವೆಂಬ ವಾದವನ್ನು ನಾವೆಲ್ಲರೂ ಹೇಳುತ್ತೇವೆ. ಆದರೆ, ಈಗ ಏನಾಗಿದೆಯೆಂದರೆ, ಮಲೆನಾಡು ಅಭಿವೃದ್ಧಿಯಾಗಬಾರದೆಂದು ನಾನು ಹೇಳುವುದಿಲ್ಲ. ಆದರೆ, ವಾಸ್ತವಾಂಶದಲ್ಲಿ ನಾವು ನೋಡೋಣ. ತಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಕೋಲಾರ ಜಿಲ್ಲೆಯನ್ನು ನಾವು ಹೋಲಿಕೆ ಮಾಡಿನೋಡೋಣ. ಯಾವುದೇ ದೃಷ್ಟಿಯಲ್ಲಿ ತೆಗೆದುಕೊಳ್ಳಿ. ಆರೋಗ್ಯ ಸೌಕರ್ಯ, ಶಿಕ್ಷಣದ ಸೌಕರ್ಯ ತೆಗೆದುಕೊಳ್ಳಿ, ಅಲ್ಲಿ ದಿನಗೂಲಿ ನೌಕರರು ಇರತಕ್ಕಂಥ ಪರಿಸ್ಥಿತಿ ನೋಡೋಣ. ಇಲ್ಲಿರತಕ್ಕ ಕೋಲಾರದಲ್ಲಿರತಕ್ಕಂಥ ಜನರ ಸ್ಥಿತಿಯನ್ನು ಸಹಾ ನೋಡೋಣ. ಈಗ ಮಲೆನಾಡು ಅಭಿವೃದ್ಧಿಯಾಗಬೇಕೆಂದು ಹೇಳಿದಾಗ, ಯಾವ ಕಾರಣಕ್ಕೋಸ್ಕರ ಇದನ್ನು ಮಾಡಬೇಕು? ಕೇಂದ್ರ ಸರ್ಕಾರದಿಂದ ಅಥವಾ ವಿದೇಶಿ ಬ್ಯಾಂಕುಗಳಿಂದ ಯೋಜನೆಗಳನ್ನು ಮಾಡಿ ಸಾಲ ತೆಗೆದುಕೊಂಡು ಬಂದು, ಇದನ್ನು ಮಾಡುವುದಾದಲ್ಲಿ ಇದಕ್ಕೆ ನಾವೆಲ್ಲರೂ ಒಪ್ಪಿಗೆ ಕೊಡೋಣ. ಇದು ಅಷ್ಟಕ್ಕೆ ಮಾತ್ರ ಇರಬೇಕು. ಆದರೆ, ಇವೊತ್ತಿನ ಚರ್ಚೆಯ ಇಂಗಿತ ಏನಿದೆ, ಕೆಲವು ಮಾನ್ಯ ಸದಸ್ಯರು ಬಹಳ ಹಿಂದುಳಿದಿದೆಯೆಂದು ಹೇಳಿದ್ದಾರೆ. ಆದುದರಿಂದ, ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಹೈದರಾಬಾದ್-ಕರ್ನಾಟಕ ಏರಿಯಾ ಸಪರೇಟ್ ಸ್ಟೇಟ್ ಆಗಬೇಕು ಎನ್ನತಕ್ಕಂಥ ಮಾತು, ಧ್ವನಿ ಈ ಸಭೆಯಲ್ಲಿ ಬರಬಾರದಾಗಿತ್ತು. ಈ ಮಾತನ್ನು ಅವರು ಹೇಳಿದ್ದಾರೆ. I am not here to explain you.

DEPUTY SPEAKER : He has not named you.

Sri P.G.R. SINDHIYA : I never said it to you , ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವು ಕೇರಿಯನ್ನು ಮಾಡಬೇಕು. ಈಗ ಬೀದರ್‌ನಲ್ಲಿ ಬಹುಶಃ ಅಲ್ಲಿಂದ ಗೆದ್ದು ಬಂದಿರತಕ್ಕ ಶಾಸಕ ಮಿತ್ರರು ಒಪ್ಪುತ್ತಾರೆಯೇ? ಯಾವೊಬ್ಬ ಶಾಸಕರು ಮತ್ತು ಮಂತ್ರಿಗಳು ತಮ್ಮ ತಮ್ಮ ಕ್ಷೇತ್ರದಿಂದ ಗೆದ್ದು ಬಂದಿರತಕ್ಕವರು ಎಷ್ಟು ಸಂಪರ್ಕ ಇಟ್ಟುಕೊಂಡಿದ್ದಾರೋ, ಅಷ್ಟೇ ಜನ ಸಂಪರ್ಕವನ್ನು ಪ್ರತಿ ತಾಲ್ಲೂಕಿನಲ್ಲಿ ನಾನು ಇಟ್ಟುಕೊಂಡಿದ್ದೇನೆ. ಗುಲ್ಬರ್ಗ ಜೊತೆಯಲ್ಲೂ ಹೆಚ್ಚು-ಕಡಿಮೆ ಜಿಲ್ಲಾ ಮಟ್ಟದಲ್ಲಿ ನಾನು ಸಂಪರ್ಕವನ್ನು ಇಟ್ಟುಕೊಂಡಿದ್ದೇನೆ. ಅದು ಹಿಂದುಳಿದಿರತಕ್ಕ ಪ್ರದೇಶವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಮಾತಿನ ಧ್ವನಿ ಇದೆಯೆಲ್ಲಾ, ನಾನು ಸಪರೇಟ್ ಸ್ಟೇಟ್ ಮಾಡಿಕೊಳ್ಳಬೇಕು, ನಾವು ಬಹಳ ಹಿಂದುಳಿದಿದ್ದೇವೆ. ಅದಕ್ಕೋಸ್ಕರ ನೀವು ನಲವತ್ತು ವರ್ಷಗಳಿಂದ ಈ ಬೆಂಗಳೂರನ್ನು, ಆಳಿರತಕ್ಕಂಥ ಜನ ನಮ್ಮನ್ನು ಹೇಗೆ ಮಾಡಿದ್ದಾರೆಂದು ಹೇಳಿದಾಗ, ಗುಲ್ಬರ್ಗ ಏರಿಯಾದಿಂದ ಮುಖ್ಯಮಂತ್ರಿಗಳು ಬಂದಿಲ್ಲವೇ? ನಿಮ್ಮಲ್ಲಿಂದ ಶಾಸಕರು ಬಂದಿಲ್ಲವೇ? ನಿಮ್ಮಲ್ಲಿಂದ ಮಂತ್ರಿಗಳು ಬಂದಿಲ್ಲವೇ? ನಿಮ್ಮ ಜಿಲ್ಲೆಗಳಿಗೆ ಯಾರು ಮಂತ್ರಿಗಳು ಇರಲಿಲ್ಲವೇ? ಇದೆಲ್ಲಾ ಪ್ರಶ್ನೆ ಬರುತ್ತದೆ. ಆದುದರಿಂದ, ನಾನು ಹೇಳುತ್ತಿದ್ದೇನೆ.

ಈ ಮಂಡಳಿಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈಗ ವೆಸ್ಟನ್ ಘಾಟ್ಸ್ ಇದೆ. ವೆಸ್ಟನ್ ಘಾಟ್ಸ್ ಸ್ಕೀಮ್ ಅನ್ನು ನಾವು ಕೇಂದ್ರ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಬಂದಿರತಕ್ಕಂಥಾದ್ದು. ಅಲ್ಲಿ ರಾಜಕೀಯವಾಗಿ ಆ ಭಾಗದ ಲೋಕಸಭಾ ಸದಸ್ಯರುಗಳಿಗೆ ಶಕ್ತಿ ಇತ್ತೆಂದು ಹೇಳಿಬಿಟ್ಟು ನೀವು ತೆಗೆದುಕೊಂಡು ಬಂದಿದ್ದೀರೆಂದು ನಾನು ಹೇಳುತ್ತೇನೆ. ನಮಗೆ ಏಕೆ ಬಂದಿಲ್ಲ? ನಾನು ಹೇಳುತ್ತೇನೆ. ನಮ್ಮಿಂದ ಗೆದ್ದು ಹೋಗಿರತಕ್ಕ ಲೋಕಸಭಾ ಸದಸ್ಯರುಗಳು 20-30 ವರ್ಷ ಲೋಕಸಭೆಯಲ್ಲಿ ಕುಳಿತುಕೊಂಡು ಬಾಯಿ ಬಿಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಇದು ಚುನಾವಣೆ ಭಾಷಣ ಅಲ್ಲ ಸ್ವಾಮಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸಿಂಧ್ಯರವರೇ, This is not fair ಏಕೆಂದರೆ, ಆ ಸದಸ್ಯರು ಈ ಸದನದಲ್ಲಿಲ್ಲ. ಆ ಸದನದ ಸದಸ್ಯರ ಮೇಲೆ ಯಾರೆ ಆಗಲಿ ಇಲ್ಲಿ ಮಾತನಾಡಬಾರದು. ತಾವು ಕೂಡಾ ಸ್ಪರ್ಧಿಸಿದ್ದಿರಿ. ನೀವು ಹಿರಿಯ ನಾಯಕರಾಗಿ, ಈ ಹಿಂದೆ ಸಚಿವರಾಗಿದ್ದಂಥವರು, ಈ ರೀತಿ ಹೇಳಿದರೆ ನಮಗೆ ಆಶ್ಚರ್ಯವಾಗುತ್ತದೆ. ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಪಿ.ಜಿ.ಆರ್. ಸಿಂಧ್ಯ : ದಕ್ಷಿಣ ಕನ್ನಡ ಜಿಲ್ಲೆಯಿಂದ ಶ್ರೀನಿವಾಸ ಮಲ್ಯ ಅವರು ಟಿ.ಎಂ.ಎ.ಪೈ ಮುಂತಾದ ಬೇಕಾದಷ್ಟು ಜನ ನಿಮ್ಮ ಜಿಲ್ಲೆಯಿಂದ ದೊಡ್ಡ ದೊಡ್ಡ ರಾಜಕಾರಿಣಿಗಳು ರಾಷ್ಟ್ರ ಮಟ್ಟದಲ್ಲಿ ಬೆಳೆದರು. ಅನೇಕ ಬ್ಯಾಂಕುಗಳನ್ನು ಪ್ರಾರಂಭಮಾಡಿದರು. ನನಗೆ ಅದರ ಬಗ್ಗೆ ಹೊಟ್ಟೆಕಿಚ್ಚಿಲ್ಲ. ನಾನು ಇವೊತ್ತು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಗೆ ಬರುವಷ್ಟು ಮನಿ ಆರ್ಡರ್‌ಗಳು ಬೇರೆ ಯಾವುದೇ ಜಿಲ್ಲೆಗಳಿಗೆ ಬರುವುದಿಲ್ಲ. ಏಕೆ ಅಷ್ಟೊಂದು ಬರುತ್ತವೆ? ನಿಮ್ಮಲ್ಲಿಂದ ಬೇರೆ ಕಡೆ ಹೋಗಿ ಉದ್ಯೋಗ ಮಾಡಿಕೊಂಡು ಹಣ ದುಡಿಯುತ್ತಿದ್ದಾರೆ, ಕಷ್ಟ ಪಡುತ್ತಿದ್ದಾರೆ, ಸಂಪಾದನೆ ಮಾಡುತ್ತಿದ್ದಾರೆ. ಆದ್ದರಿಂದ, ನಿಮ್ಮ ಜಿಲ್ಲೆಗೆ ದುಡ್ಡನ್ನು ಕಳುಹಿಸುತ್ತಾರೆ. ಅದು ಕರ್ನಾಟಕಕ್ಕೆ ಬಂದಂತೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಅದರ ಬಗ್ಗೆ ನನಗೆ ಹೆಮ್ಮೆ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇವೊತ್ತು ನಮಗೆ ರಾಜಕೀಯವಾಗಿ ಶಕ್ತಿ ಇಲ್ಲದೇ ಇರತಕ್ಕ ಜಿಲ್ಲೆಗಳು ಏನಿವೆ,

ಈಗ ಚಿತ್ರದುರ್ಗ, ಬೆಂಗಳೂರು(ಗ್ರಾಮಾಂತರ), ಕೋಲಾರ, ಮೈಸೂರು, ಮಂಡ್ಯ ಜಿಲ್ಲೆಯಲ್ಲಿರತಕ್ಕ ಪಾಂಡವಪುರ ತಾಲ್ಲೂಕುಗಳ ಬಗ್ಗೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ : ನಮ್ಮಲ್ಲಿರತಕ್ಕಂಥ ಹೆಣ್ಣು ಮಕ್ಕಳು ಬಸರಿಯಾದರೆ, ಅವರನ್ನು ಜೋಳಿಗೆಯಲ್ಲಿ ನಾಲ್ಕೈದು ಮೈಲಿಗಳಿಂದ ಹೊತ್ತುಕೊಂಡು ಬರುತ್ತಿದ್ದಾರೆ. ಇವೊತ್ತು ನನ್ನ ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳು ಇದೆ. ನಾಲ್ಕು ಲಕ್ಷ ಜನಸಂಖ್ಯೆ ಇದೆ, ಮೂರು ಆಸ್ಪತ್ರೆಗಳಿವೆ, ಎರಡು ಸರ್ಕಾರಿ ಹೈಸ್ಕೂಲುಗಳು ಇದ್ದದ್ದು. ಈಗ ಎರಡು ಮೂರು ವರ್ಷಗಳಲ್ಲಿ ಇನ್ನೊಂದು ಹೈಸ್ಕೂಲನ್ನು ಕೊಟ್ಟಿದ್ದಾರೆ.

ನಾಲ್ಕೈದು ಆಸ್ಪತ್ರೆಗಳನ್ನು ಕಟ್ಟಿದ್ದರೆ. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಅನೇಕ ಸದಸ್ಯರ ವಾದ, ಬಹಳ ಮುಂದುವರಿದು ಬಿಟ್ಟಿದೆ, ಸರ್ಕಾರದ ಎಲ್ಲಾ ಹಣವನ್ನೂ ನಲವತ್ತು ವರ್ಷದಲ್ಲಿ ಇಲ್ಲಿದ್ದವರೇ ಹೊಡೆದುಕೊಂಡು ಬಿಟ್ಟಿದ್ದಾರೆ, ಹಂಚಿಕೊಂಡು ಬಿಟ್ಟಿದ್ದಾರೆ, ನಮಗೆ ಏನೂ ಆಗಿಲ್ಲ, ಈ ಭಾವನೆ ಬೇಡ. ಬೇಕೆಂದರೆ, ಅದಕ್ಕೆ ನಾಲ್ಕು ಜನ ಉನ್ನತ ಅಧಿಕಾರಿಗಳಿಂದ ಕೆಲವು ಗೇಜ್‌ಸ್ ಅನ್ನು ಫಿಕ್ಸ್ ಮಾಡಿ. ಎಜುಕೇಷನ್ ಸ್ಟ್ಯಾಂಡರ್ಡ್ ಎಷ್ಟಾಗಿದೆ? ಮತ್ತೆ ಇವರ ಸೋಷಿಯಲ್ ಸ್ಟೇಟಸ್ ಏನಿದೆ? ಎಕನಾಮಿಕ್ ಸ್ಟೇಟಸ್ ಏನಿದೆ? ಇದೆಲ್ಲವನ್ನೂ ಕೆಲವು ಮೆಷರಿಂಗ್ ಸ್ಟಿಕ್ಸ್ ಅನ್ನು ಫಿಕ್ ಮಾಡಿ ಅದರ ಆಧಾರದ ಮೇಲೆ ನೀವು ಹೇಳುವುದಾದರೆ ನಾವು ಒಪ್ಪಿಕೊಳ್ಳುತ್ತೇವೆ. ಹೌದು, ನಿಮಗಿಂತ ನಾವು ಮುಂದುವರೆದಿದ್ದೇವೆಂದು ಒಪ್ಪಿಕೊಳ್ಳುತ್ತೇವೆ. ಬೆಂಗಳೂರಿನಲ್ಲಿರತಕ್ಕಂಥ ಅವಿನ್ಯೂ ರಸ್ತೆ ಮತ್ತು ಮೆಜೆಸ್ಟಿಕ್ ಸುತ್ತ-ಮುತ್ತಲಿರತಕ್ಕಂಥ ರಾತ್ರಿ ಹೊತ್ತು ಜಳ ಜಳ, ಪಳ, ಪಳ, ಹೇಳುತ್ತದೆಂದು ಹೇಳಿ ಇಲ್ಲಿರತಕ್ಕಂಥವರೆಲ್ಲಾ ಮುಂದುವರೆದಿದ್ದೇವೆ ಎಂದು ಹೇಳಿದರೆ ಯಾವ ನ್ಯಾಯ? ಇವೊತ್ತು ರಾಯಚೂರು, ಬಿಜಾಪುರ. ಗುಲ್ಬರ್ಗ ಜಿಲ್ಲೆಗೆ ಅಪ್ಪರ್ ಕೃಷ್ಣಾ ಯೋಜನೆಯಿಂದ ಲಕ್ಷಾಂತರ ಎಕರೆಗೆ ನೀರಾವರಿ ಸಿಗುತ್ತದೆಂದರೆ ಅದರ ಫಲ ನಮಗೆ ಇದೆಯೆಂದು ನಾವು ಅಂದುಕೊಂಡಿದ್ದೇವೆ. ಆದರೆ, ನಮಗೆ ಯಾವ ಯೋಜನೆ ಇದೆ?

ಆದ್ದರಿಂದ ಕಾವೇರಿ ನೀರನ್ನು ಕೋಲಾರಕ್ಕೆ ಕೊಡುವುದಕ್ಕೆ ಆಗುವುದಿಲ್ಲ. ಅದೇ ರೀತಿ ತುಮಕೂರಿಗೆ ನೀವು ಎಷ್ಟೇ ಪ್ರಯತ್ನ ಮಾಡಿದರೂ ಸಹಿತ ನೀವು ಬಾಗೂರ್‌ನವಿಲೆ ಟನಲ್ ಮಾಡಿ ಹೇಮಾವತಿ ನೀರನ್ನು ಕೊಡುತ್ತೇವೆಂದೂ ಹೇಳಿದರೂ, ಆ ಟೇಲ್‌ಎಂಡ್ ನೀರನ್ನು ನೀವು ಕೊಡುವುದಕ್ಕೆ ಆಗುವುದಿಲ್ಲ. ಕ್ರಾಪಿಂಗ್ ಪ್ಯಾಟರ್ನ್ ಬಗ್ಗೆ ಹಾಸನ ಜಿಲ್ಲಾ ರೈತರುಗಳು ಏನಾದರೂ ದೊಡ್ಡ ಮನಸ್ಸು ಮಾಡಿ ಅವರು ಚೇಂಜ್ ಮಾಡಿದರೆ ತುಮಕೂರಿಗೆ ಒಂದಿಷ್ಟು ನೀರು ಸಿಗಬಹುದು. ಕೋಲಾರಕ್ಕೆ ಎಲ್ಲಿಂದ ನೀರನ್ನು ಕೊಡುವುದಕ್ಕೆ ಸಾಧ್ಯ? ನಮಗೆ ಇದ್ದಿದ್ದು ಒಂದು ಚಿನ್ನ, ಅದನ್ನೂ ಮುಚ್ಚು ಹಾಕುತ್ತಿದ್ದೇವೆ. ಇಂಥ ಪರಿಸ್ಥಿತಿ ಇದೆ. ಆದುದರಿಂದ ಸರ್ಕಾರ ತಂದಿರುವಂಥ ಈ ಮಲೆನಾಡು ಅಭಿವೃದ್ಧಿ ಮಸೂದೆ ಏನಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಹೈದರಬಾದ್ ಕರ್ನಾಟಕ ಏರಿಯಾ ಅಭಿವೃದ್ಧಿಗೆ ತಂದಿರುವಂಥ ಮಸೂದೆಯನ್ನು ಸಹ ನಾವು ಸ್ವಾಗತಿಸುತ್ತೇವೆ. ಯಾವುದೇ ಸದಸ್ಯರುಗಳಿಗೆ ಅಥವಾ ಮುಖಂಡರುಗಳಿಗೆ ನಾವು ಇಲ್ಲಿ ಕುಳಿತುಕೊಂಡು ವಿರೋಧ ಮಾಡುತ್ತಿದ್ದೇವೆ ಎನ್ನುವ ಭಾವನೆ ಬೇಡ. ನಾವು ಖಜಾನೆಗೆ ಹತ್ತಿರ ಇದ್ದೇವೆ. ರಾಜಧಾನಿಯಲ್ಲಿ ಇದ್ದೇವೆ, ಎಲ್ಲವನ್ನೂ ಕೊಳ್ಳೆ ಹೊಡೆದಿದ್ದೇವೆ ಎನ್ನುವ ಭಾವನೆಯೂ ಬೇಕಾಗಿಲ್ಲ. ನಾವು ಇಲ್ಲಿ ಏಕೀಕರಣದ ಮಾತನ್ನು ಆಡಬೇಕಾಗಿದೆ. ನನಗೆ ಬಹಳ ನೋವಾಯಿತು. ಮೊನ್ನೆ ದಿನ ಮುಂಬೈ-ಕರ್ನಾಟಕದ ನಮ್ಮ

ಎಲ್ಲಾ ಶಾಸಕರುಗಳೂ ಊಟಕ್ಕೆ ಸೇರಿದ್ದರಂತೆ. ಸೇರಲಿ ಸಂತೋಷ. ಅದಕ್ಕೆ ನನ್ನ ವಿರೋಧವೇನೂ ಇಲ್ಲ. ಅವರು ಜೋಳದ ರೊಟ್ಟಿ ತಿನ್ನುತ್ತಾರೆ, ನಾವು ರಾಗಿ ಮುದ್ದೆ ತಿನ್ನುತ್ತೇವೆ. ಅವರು ಬದನೇಕಾಯಿ ತಿನ್ನುತ್ತಾರೆ, ನಾವು ಹುರುಳಿಕಾಯಿ ತಿನ್ನುತ್ತೇವೆ. ಬಹಳ ಸಂತೋಷ. ಆದರೆ ಇದು ಅಷ್ಟಕ್ಕೇ ನಿಲ್ಲಬೇಕು. ಆದರೆ ಮುಂಬೈ-ಕರ್ನಾಟಕದ ಶಾಸಕರುಗಳಿಗೆ ನಾವು ಇಲ್ಲಿರುವವರೆಲ್ಲಾ ಕೊಳ್ಳೆ ಹೊಡೆದಿದ್ದೇವೆ ಎಂಬ ಭಾವನೆ ಬಂದರೆ, ಕನ್ನಡನಾಡಿನ ಪರಿಸ್ಥಿತಿ ಏನಾಗಬೇಕು ಎಂಬುದನ್ನು ತಾವು ಯೋಚನೆ ಮಾಡಬೇಕು. ಸಮಗ್ರ ಕನ್ನಡ ನಾಡಿನ ಯೋಚನೆಯನ್ನು ನಾವು ಮಾಡಬೇಕು. ಇದು ಒಂದು ಕಡೆಯಾದರೆ, ಇನ್ನೊಂದು ಕಡೆ ನಾವು ಇವತ್ತು ಏನು ಅಭಿವೃದ್ಧಿ ಮಂಡಳಿಗಳನ್ನು ರಚನೆ ಮಾಡುತ್ತಿದ್ದೇವೆ. ಈ ಮಂಡಳಿಗಳ ಗತಿ ಇವತ್ತು ಏನಾಗಿದೆ? ತಮಗೆ ಗೊತ್ತಿದೆ ಈ ಬ್ಯೂರೋಕ್ರೆಸಿ ಇವತ್ತಿನ ದಿವಸ ಯಾವ ಪ್ರಮಾಣದಲ್ಲಿ ಬೆಳೆದಿದೆ ಎಂಬುದು. ಇವತ್ತಿನ ದಿವಸ ಯಾವುದೇ ಒಂದು ಇಲಾಖೆಯಲ್ಲಿರುವಂಥ ನೌಕರ ವರ್ಗದವರಿಂದಾಗಲೀ, ಅಧಿಕಾರಿ ವರ್ಗದಿಂದಾಗಲೀ ನಾವು ಸರಿಯಾದ ಕೆಲಸವನ್ನು ತೆಗೆದುಕೊಂಡರೆ, ಇನ್ನೂ 3 ಸರ್ಕಾರಗಳನ್ನು ನಾವು ನಡೆಸಬಹುದು ಎಂಬುದು ತಮಗೂ ಗೊತ್ತಿದೆ. ಆದರೆ ಇವತ್ತಿನ ವ್ಯವಸ್ಥೆಯಲ್ಲಿ ಅದನ್ನು ಮಾಡುವುದು ಬಹಳ ಕಷ್ಟ. ಅದು ನನಗೂ ಅರ್ಥವಾಗುತ್ತದೆ. ಈ ಮಂಡಳಿಗಳನ್ನು ಮಾಡುವುದರಿಂದ ಒಂದು ನಾಲ್ಕು ಜನ ಐಎಎಸ್ ಅಥವಾ ಐಪಿಎಸ್ ಆಫೀಸರ್‌ಗಳಿಗೆ ಪ್ರೊಮೋಷನ್ ಸಿಗಬಹುದು. ಸಿಗಲಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಉಳಿದಿರತಕ್ಕ ಪ್ಯಾರಾಫರ್‌ನೇಲಿಯಾವನ್ನು ಬೆಳೆಸಿಕೊಂಡು ಹೋದರೆ, ಕೋಟ್ಯಾಂತರ ರೂ.ಗಳು ಅವರ ಸಂಬಳಕ್ಕೆ ಹೋಗುತ್ತದೆಯೇ ಹೊರತು ಈ ಮಂಡಳಿಗಳ ಉದ್ದೇಶ ಏನು, ಸಾಧನೆ ಮಾಡಿದಂತೆ ಆಗುತ್ತದೆ? ಇವತ್ತು ಜಿಲ್ಲಾ ಪರಿಷತ್ತುಗಳನ್ನು ಮಾಡಿದ್ದೇವೆ, ಮಂಡಲ ಪಂಚಾಯತಿಗಳನ್ನು ಮಾಡಿದ್ದೇವೆ ಅಥವಾ ನಾಳೆ ನೀವು ಏನೋ ಒಂದು ಕಾನೂನು ಬದಲಾವಣೆ ಮಾಡಿ ನಿಮಗೆ ಬೇಕಾಗಿರುವ ಹಾಗೆ ಮಾಡಿಕೊಳ್ಳಬಹುದು. ನೀವು ಹೇಳಿದ್ದೀರಿ ನಿಮಗೆ ವಿಕೇಂದ್ರೀಕರಣದಲ್ಲಿ ಸಂಪೂರ್ಣವಾದ ನಂಬಿಕೆ ಇದೆ ಎಂದು ಮಾಡಿ, ಅದಕ್ಕೆ ನಮ್ಮ ಯಾವುದೇ ವಿರೋಧ ಇಲ್ಲ. ಅದಕ್ಕೆ ಹೆಚ್ಚಿನ ಹಣ ಕೊಡಿ ಯಾರು ಬೇಡವೆಂದು ಹೇಳುತ್ತಾರೆ. ಆ ಕಾರಣದಿಂದ ತಾವು ಇವತ್ತು ಇದರ ಬಗ್ಗೆ ಒಂದು ಎಚ್ಚರಿಕೆಯನ್ನು ವಹಿಸಬೇಕು. ಇವತ್ತು ಈ ಒಂದು ಮಸೂದೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಅಧಿಕಾರಶಾಹಿಯನ್ನು ಮತ್ತು ನೌಕರಶಾಹಿಯನ್ನು ಶಕ್ತಿಯನ್ನು ಹೆಚ್ಚಿಗೆ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಖರ್ಚಾಗುತ್ತದೆ. ನಮ್ಮ ಸರ್ಕಾರದ ಬೊಕ್ಕಸದಲ್ಲಿ ರೂಪಾಯಿಗೆ ಎಂಟು ಆಣೆ ಹಣ ಇವರ ಸಂಬಳ ಸಾರಿಗೆಗಾಗಿ ಖರ್ಚು ಮಾಡುತ್ತಿದೆ. ಇನ್ನು ಎಂಟು ಆಣೆ ಮಾತ್ರ ಅಭಿವೃದ್ಧಿ ಕಾರ್ಯಕ್ಕೆ ಉಳಿದಿರುವಂಥದ್ದು : ಇವರ ಸಂಬಳ ಸಾರಿಗೆಗೆ ಇನ್ನೂ ಹೆಚ್ಚು ಖರ್ಚು ಮಾಡುವುದರಲ್ಲಿ ಅರ್ಥವಿಲ್ಲ. ಆದುದರಿಂದ ಈ ಮಸೂದೆಯನ್ನು ತರತಕ್ಕಂಥ ಈ ಒಂದು ಸಂದರ್ಭದಲ್ಲಿ ಸರ್ಕಾರ ಇದರ ಬಗ್ಗೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿದೆ. ಮಾತೆತ್ತಿದರೆ ಒಂದೊಂದು ಅಭಿವೃದ್ಧಿ ಮಂಡಳಿ ಮಾಡಿಕೊಂಡು ಹೋಗುತ್ತಿದ್ದೀರಿ. ಇವತ್ತು ನಮ್ಮಲ್ಲಿ ಸಾಕಷ್ಟು ಮಂಡಳಿಗಳು ಆಗಿವೆ: ಬೀದರ್ ಅಭಿವೃದ್ಧಿ ಮಂಡಳಿ, ಗುಲ್ಬರ್ಗ ಅಭಿವೃದ್ಧಿ ಮಂಡಳಿ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ, ಬೆಂಗಳೂರು ಸಿಟಿ ಡೆವೆಂಪ್‌ಮೆಂಟ್ ಅಥಾರಿಟಿ, ಕೋಲಾರ್ ಡ್ರೈಲ್ಯಾಂಡ್ ಬೋರ್ಡ್ ಮುಂತಾದುವನ್ನು ಮಾಡಿದ್ದೀರಿ. ಎಲ್ಲದ್ದಕ್ಕೂ

ಒಬ್ಬೊಬ್ಬ ಅಧಿಕಾರಿ, ಒಬ್ಬೊಬ್ಬ ಪಿಎ ಒಂದೊಂದು ಕಾರ್ ಕೊಡಲಾಗಿದೆ., ಇದು ನಿಮ್ಮ ಕಾಲ ನಮ್ಮ ಕಾಲವೆಂದಲ್ಲ, ಎಲ್ಲಾ ಕಾಲದಲ್ಲೂ ನಡೆದುಕೊಂಡು ಬಂದಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್ಲಾ ಕಾಲವೂ ಒಂದೇ, ಖಜಾನೆಯೂ ಒಂದೇ. ಆದ್ದರಿಂದ ನಾನು ಮುಖ್ಯ ಮಂತ್ರಿಗಳಲ್ಲಿ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು ಹಾಗೂ ತಾವು ಇದನ್ನು ಮಾಡತಕ್ಕ ಸಂದರ್ಭದಲ್ಲಿ ಈ ಕಡೆ ಗಮನ ಕೊಡಬೇಕೆಂದು ಒತ್ತಾಯ ಮಾಡಿ ಈ ಮಸೂದೆಯನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನಾನು ಮಾತನಾಡುವಾಗ ಹೇಳಿದೆ, ಈ ಮೈದಾನ ಪ್ರದೇಶಗಳು ಏನಿವೆ. ಅವು ಬಹಳ ಹಿಂದುಳಿದ ಪ್ರದೇಶಗಳಾಗಿವೆ ಎಂದು. ಅಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ, ಇರಿಗೇಷನ್ ಪೊಟ್‌ನ್‌ಷಿಯಾಲಿಟಿ ಇಲ್ಲ. ಅಲ್ಲಿ ಎಲ್ಲಾ ಐವತ್ತು ಎಕರೆ ನೀರಾವರಿ ಮಾಡುವಂಥ ಒಂದು ಕೆರೆಯನ್ನು ಕಟ್ಟುವುದಕ್ಕೆ ಕೂಡ ಆಗುವುದಿಲ್ಲ. ಇಂಥ ಕಡೆಗಳಲ್ಲಿ ಗಂಗಾ ಕಲ್ಯಾಣ ಮಾಡದೇ ಹೋದರೆ ಬಡತನ ಜಾಸ್ತಿಯಾಗುತ್ತದೆ. ನಮ್ಮ ನಾಲ್ಕೈದು ಜಿಲ್ಲೆಗಳಲ್ಲಿ ಕೆರೆಗಳಲ್ಲಿ ಹಕ್ಕಿಗಳಿಗೂ ಕುಡಿಯುವುದಕ್ಕೂ ನೀರಿಲ್ಲದಂತಾಗಿದೆ.

ಇದನ್ನು ಮುಖ್ಯ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಮೊನ್ನೆ 15 ದಿವಸದಲ್ಲಿ ಮಳೆಯಾಗಿದೆ, ಮಳೆಯಾಗದಿದ್ದಲ್ಲಿ ರಾಗಿ ಬೆಳೆ ಕೂಡ ಹೋಗುತ್ತಿತ್ತು.

(ಗೊಂದಲ)

ಉಪಾಧ್ಯಕ್ಷಿಣಿಯವರು: ಮಾನ್ಯ ಜಾಲಪ್ಪನವರೇ, ಇದು ವಿಧೇಯಕದ ಬಗ್ಗೆ ಈಗ ಚರ್ಚೆ ಆಗುತ್ತಿರುವುದು. ನೀವು ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ....

ಶ್ರೀ ಆರ್.ಎಲ್. ಜಾಲಪ್ಪ : ಒಂದೊಂದು ಜಿಲ್ಲೆಗೆ ಅಭಿವೃದ್ಧಿ ಕಾರ್ಯಗಳಿಗೆ 1-2 ಕೋಟಿ ರೂ.ಗಳನ್ನು ಆದರೂ ಕೊಡದೇ ಹೋದರೆ ಬಹಳ ತೊಂದರೆಯಾಗುತ್ತದೆಯೆಂದು ಹೇಳಬಯಸುತ್ತೇನೆ. ಈ ಬಿಲ್‌ನ್ನು ನಾವು ವೆಲ್‌ಕಂ ಮಾಡಿದ್ದೇವೆ

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾವ್) : ಮಲೆನಾಡು ಅಭಿವೃದ್ಧಿ ಮಂಡಳಿಯ ವಿಧೇಯಕಕ್ಕೆ ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಂಡಳಿಯ ವಿಧೇಯಕವನ್ನು ನನ್ನ ಸ್ವಾಗತಿಸುತ್ತಾ; ಒಂದೆರಡು ಮಾತನ್ನು ಹೇಳಬಯಸುತ್ತೇನೆ. ನಮ್ಮ ಶಿಗ್ಗಾಂ ತಾಲ್ಲೂಕಿನ 48 ಹಳ್ಳಿಗಳು ಮಲೆನಾಡು ಪ್ರದೇಶದಲ್ಲಿ ಬರುತ್ತದೆ. ಅವುಗಳನ್ನು ಈ ಮಲೆನಾಡು ಅಭಿವೃದ್ಧಿ ಮಂಡಳಿಯ ವಿಧೇಯಕದಲ್ಲಿ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ 48 ಹಳ್ಳಿಗಳ ಪಟ್ಟಿಯನ್ನು ನಾನು ಮಾಡಿದ್ದೇನೆ. ಈ ಪಟ್ಟಿಯನ್ನು ಉಪಾಧ್ಯಕ್ಷಿಣಿಯವರ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

ಇವತ್ತು ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಈ ಅಭಿವೃದ್ಧಿ ಮಂಡಳಿಗೆ ವಿಶೇಷವಾಗಿ ಅಭಿವೃದ್ಧಿ ಮಾಡುವುದಕ್ಕೋಸ್ಕರ ಸಿಗುವುದರಿಂದ ಇಂತಹ ಮಂಡಳಿಗಳನ್ನು ರಚನೆ ಮಾಡುವುದರಲ್ಲಿ ಏನೂ ತಪ್ಪಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವರೀತಿಯಾಗಿ ಈವತ್ತು ಹೈದರಾಬಾದ್ ಕರ್ನಾಟಕ

ಅಭಿವೃದ್ಧಿ ಮಂಡಳಿ ಆಗಿದೆ, ಅದೇ ರೀತಿ ಮಲೆನಾಡು ಅಭಿವೃದ್ಧಿ ಮಂಡಳಿಯಾಗಿದೆ. ಈಗಾಗಲೇ ನಮ್ಮ ವಿರೋಧ ಪಕ್ಷದ ಉಪನಾಯಕರಾದ ಮಾನ್ಯ ಸಿಂಧ್ಯರವರು ಹೇಳಿದ್ದರು, ಮುಂಬೈ ಕರ್ನಾಟಕ ಪ್ರದೇಶದ ಶಾಸಕರು ಕೂಡ ಕೂಡಿದ್ದರು. ಅದರಲ್ಲಿ ನಾನು ಕೂಡ ಭಾಗವಹಿಸಿದ್ದೆ. ಸರ್ವಪಕ್ಷಗಳ ಶಾಸಕರ ವೇದಿಕೆಯನ್ನು ತಯಾರು ಮಾಡಲಾಗಿದೆ. ಈ ಪ್ರದೇಶ ಸುಮಾರು 8-10 ವರ್ಷಗಳಿಂದ ಬರಗಾಲದಿಂದ ಕೂಡಿದೆ. ಕುಡಿಯುವ ನೀರಿಗೆ ಕೂಡ 8-10 ವರ್ಷಗಳಿಂದ ಈ ಭಾಗಗಳಲ್ಲಿ ಇರಲಿಲ್ಲ. ಅಂತಹ ಒಂದು ದುಷ್ಟಕರ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಈ ವರ್ಷ ಸುದೈವದಿಂದ ಮಳೆಯಾಗಿ ಅತಿವೃಷ್ಟಿಯಿಂದ ಸಂಪೂರ್ಣವಾಗಿ ಬೆಳೆಗಳು ನಾಶವಾಗಿವೆ. ಆ ದೃಷ್ಟಿಯಿಂದ ಈ ಮಾದರಿಯಲ್ಲಿ ಮುಂಬೈ ಕರ್ನಾಟಕ ಪ್ರದೇಶದಲ್ಲಿ ಬರಗಾಲ ಪೀಡಿತ ಅಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡು ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಮಲೆನಾಡು ಪ್ರದೇಶದ ಅಭಿವೃದ್ಧಿ ವಿಧೇಯಕವನ್ನು ಸರ್ಕಾರ ತಂದಿರುವುದಕ್ಕೆ ನಾನು ತುಂಬು ಹೃದಯದಿಂದ ಸ್ವಾಗತಮಾಡುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರುಗಳು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಲಿಗೆ ಕೆಲವು ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಇನ್ನು ಕೆಲವು ತಾಲ್ಲೂಕುಗಳನ್ನು ಸೇರಿಸಿಲ್ಲ. ನಮ್ಮ ಅರಕಲುಕೂಡು ತಾಲ್ಲೂಕು ಬೇರೆ ತಾಲ್ಲೂಕುಗಳಿಗಿಂತ ದೊಡ್ಡದಾಗಿದೆ. ಅರಕಲಗೂಡು ತಾಲ್ಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಿಲ್ಲ. ಮಳೆ ಯಾವ್ಯಾವ ತಾಲ್ಲೂಕುಗಳಲ್ಲಿ ಬಿಳುತ್ತಿಲ್ಲವೋ ಅಂತಹ ತಾಲ್ಲೂಕುಗಳನ್ನು ಆಯ್ಕೆ ಮಾಡಿ ಸೇರಿಸಬೇಕು. ಅದನ್ನು ಪುನರ್‌ವಿಮರ್ಶೆ ಮಾಡಿದರೆ ಅನುಕೂಲವಾಗುತ್ತದೆ. ಅಂಕಿಅಂಶಗಳ ಆಧಾರದ ಮೇಲೆ, ಸೇರಿಸದೆ ಇರತಕ್ಕ ತಾಲ್ಲೂಕುಗಳನ್ನು ಕೂಡಲೇ ಸೇರಿಸಿಕೊಳ್ಳಬೇಕು. ನಮ್ಮ ತಾಲ್ಲೂಕಿಗಿಂತ ಚಿಕ್ಕ ತಾಲ್ಲೂಕಾದ ಪಿರಿಯಾಪಟ್ಟಣ ತಾಲ್ಲೂಕನ್ನು ಸೇರಿಸಿದ್ದಾರೆ, ಆದರೆ ನಮ್ಮ ತಾಲ್ಲೂಕನ್ನು ಸೇರಿಸಿಲ್ಲ. ಇದು ಯಾವ ನ್ಯಾಯ? ಯಾವ್ಯಾವ ತಾಲ್ಲೂಕನ್ನು ಸೇರಿಸಿಲ್ಲ ಆ ತಾಲ್ಲೂಕುಗಳಿಗೆ ಆದ್ಯತೆಯನ್ನು ಕೊಟ್ಟು, ಸೇರಿಸಬೇಕೆಂದು ಒತ್ತಾಯಮಾಡುತ್ತಾ, ನನಗೆ ಎರಡು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ನಾಗರತ್ನಮ್ಮ (ಯೋಜನೆ ಮತ್ತು ಸಾಂಖ್ಯಿಕ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಲೆನಾಡಿನ ಸೌಂದರ್ಯ ಹೊಸದೇನೂ ಅಲ್ಲ. ಮಲೆನಾಡಿನ ಸೌಂದರ್ಯವನ್ನು ವಿವರಿಸುತ್ತಾ ಹೋದರೆ ಅದಕ್ಕೆ ಬೇಕಾದಷ್ಟು ನಿದರ್ಶನವನ್ನು ಕೊಡಬಹುದು. ಬದರಿನಾರಾಯಣ ಕಾಲದಿಂದಲೂ ಮಲೆನಾಡಿನ ಸೌಂದರ್ಯವನ್ನು ನೋಡಬಹುದು. ಇಂತಹ ಪುರಾಣ ಪ್ರಸಿದ್ಧನಾದಂತಹ ಮಲೆನಾಡಿನ ಸೌಂದರ್ಯವನ್ನು ವರ್ಣಿಸುತ್ತಾ ಹೋದರೆ ಬೇಕಾದಷ್ಟು ವರ್ಣನೆಯನ್ನು ಮಾಡಬಹುದು. ನಾನೂ ಸಹ ಮಲೆನಾಡಿನ ಜಿಲ್ಲೆಯಲ್ಲೇ ಹುಟ್ಟಿದವಳು.

ನಿಜ, ಮಲೆನಾಡು ವಿಚಾರವಾಗಿ ನನಗೆ ಹೊಸದಾಗಿ ಏನೂ ಹೇಳಿಕೊಡಬೇಕಾಗಿಲ್ಲ. ನನ್ನ ತಂದೆ ಮತ್ತು ತಾಯಿ ಮಲೆನಾಡಿಗೆ ಸೇರಿದವರೇ. ಮಲೆನಾಡು ಬಹು ಸುಂದರ. ಮಲೆನಾಡಿನ ಕಷ್ಟ ನನಗೆ ಹೊಸದೇನೂ ಅಲ್ಲ. ಚಾರಿತ್ರಿಕವಾಗಿ ಮತ್ತು ಭೌಗೋಳಿಕವಾಗಿ ಹಿಂದುಳಿದಿರುವಂಥ ಇಲ್ಲಿಯ ಜನರ ಮತ್ತು ಪ್ರದೇಶದ

ಅಭಿವೃದ್ಧಿಗೋಸ್ಕರ ವೆಸ್ಟರ್ನ್ ಘಾಟ್ಸ್ ಮಾದರಿಯಲ್ಲೇ ಇದಕ್ಕೂ ಒಂದು ಬೋರ್ಡ್‌ನ್ನು ಮಾಡಬೇಕೆಂದು ಹತ್ತು ಕೋಟಿ ರೂ.ಗಳನ್ನು ಇಟ್ಟಿದ್ದೇವೆ ಹಾಗು ಸೆಂಟ್ರಲ್ ಗವರ್ನಮೆಂಟ್‌ನ ಪ್ಲಾನಿಂಗ್ ಕಮೀಷನ್‌ಗೆ ಬರೆದು ಇದರ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಹಣವನ್ನು ಪಡೆದುಕೊಂಡು ಇದಕ್ಕಾಗಿ ಖರ್ಚು ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಈಗ ಇಟ್ಟಿರುವ ಹತ್ತು ಕೋಟಿ ರೂಪಾಯಿ ಜಿಲ್ಲಾ ಪರಿಷತ್ತಿನ ಹಣಕ್ಕೆ ಸೇರುವುದಿಲ್ಲ. ಇದು ಒಂದು ಕಾಂಪ್ಲಿಮೆಂಟರಿ ಆಕ್ಟ್. ಜಿಲ್ಲಾ ಪರಿಷತ್ತಿನ ಆಕ್ಟ್‌ಗೂ ಇದಕ್ಕೂ ಯಾವುದೇ ರೀತಿಯಾದ ಸಂಬಂಧ ಇಲ್ಲ. ಅದಕ್ಕೂ ಇದಕ್ಕೂ ಏನಿಮಿಟಿ ಬರುವುದಿಲ್ಲ. ವಿರೋಧವಾಗುವುದಿಲ್ಲ. ಈ ಬೋರ್ಡ್‌ಗೆ ಕೊಡುವಂಥ ಹಣ ಸೀದಾ ಸ್ಟೇಟ್ ಗವರ್ನಮೆಂಟ್ ಪ್ಲಾನಿಂಗ್ ಎಕ್ಸ್‌ಚೆಕರ್‌ನಿಂದ ಬರುವುದರಿಂದ, ಜಿಲ್ಲಾ ಪರಿಷತ್ತಿಗೆ ಕೊಡುವಂಥ ಹಣಕ್ಕೂ ಇದಕ್ಕೂ ಯಾವುದೇ ರೀತಿಯಾದ ಕಾನ್‌ಫ್ಲಿಕ್ಟ್ ಬರುವುದಿಲ್ಲ. ಒಬ್ಬೊಬ್ಬ ಸದಸ್ಯರು ಇದಕ್ಕೆ ನಮ್ಮದೇ ಆದ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಕೊಡುತ್ತಿದ್ದಾರೆ. ನಮ್ಮ ಅರಕಲಗೂಡಿನ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರಂತೂ ಅವರ ತಾಲ್ಲೂಕನ್ನು ಇದರಲ್ಲಿ ಸೇರಿಸಿಲ್ಲವೆಂದೂ ನೀವು ನಿಮ್ಮ ಇಷ್ಟ ಬಂದಹಾಗೆ ಮಾಡುತ್ತಿದ್ದೀರಿ ಎಂದು ಬಾಯಿಗೆ ಬಂದಹಾಗೆ ಮಾತನಾಡಿದ್ದಾರೆ. ಶಿಕ್ಷಣ ಸಚಿವರಾದ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಈಗಾಗಲೇ ಹೇಳಿದಹಾಗೆ, ಇದರಲ್ಲಿ ಬಿಟ್ಟು ಹೋಗಿರುವಂಥ 8ತಾಲ್ಲೂಕನ್ನು ಸೇರಿಸಲು ನಾವು ಸೆಂಟ್ರಲ್ ಗವರ್ನಮೆಂಟ್‌ಗೆ ಬರೆದಿದ್ದೇವೆ. ವೆಸ್ಟರ್ನ್ ಘಾಟ್ಸ್‌ನಲ್ಲೂ ಕೆಲವು ಭಾಗಗಳು ಬಿಟ್ಟುಹೋಗಿವೆ. ಅದನ್ನು ಸೇರಿಸುವಂಥ ಕೆಲಸವನ್ನು ಮಾಡುವಾಗ ಇದನ್ನೂ ಮಾಡುತ್ತೇವೆ ಎಂದು ನಾನು ಅಪ್ಪರ್ ಹೌಸ್‌ನಲ್ಲಿ ಮಾತನಾಡುವಾಗ ತಿಳಿಸಿದ್ದೆ. ಅದೇ ರೀತಿ ಮಾಡುತ್ತೇವೆ. ನಾವು ನಮ್ಮ ಹೇಳಿಕೆಯಿಂದ ದೂರ ಹೋಗುವುದಿಲ್ಲ, ಇದಕ್ಕಾಗಿ ಹತ್ತು ಕೋಟಿ ರೂ.ಗಳ ಅಲೋಕೇಷನ್ ಏನಿದೆ ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾವು ಒತ್ತಾಯ ಮಾಡಬೇಕಾಗಿದೆ. ಅದನ್ನು ಬಿಟ್ಟು ಶ್ರೀಮತಿ ನಾಗರತ್ನಮ್ಮನವರಿಗೆ ಮಲೆನಾಡಿನ ಬಗ್ಗೆ ಏನೂ ಗೊತ್ತಿಲ್ಲವೆನ್ನುವ ಮಾತನ್ನು ತಾವು ಆಡಬಾರದು. ಪ್ಲಾಂಟೇಷನ್ ಕ್ರಾಪ್ ಬಗ್ಗೆ ಹೇಳುವುದಾದರೆ, ಕಾಫಿಯನ್ನು ಇಲ್ಲಿ ಬಹಳವಾಗಿ ಬೆಳೆಯಲಾಗುತ್ತಿದೆ. ನಮ್ಮ ಮನೆಯಲ್ಲಿಯೂ ನಾವು ಕಾಫಿ ಬೆಳೆಯನ್ನು ಹಾಕಿದ್ದೇವೆ. ಹೈದರಾಬಾದ್ - ಕರ್ನಾಟಕ ಪ್ರದೇಶ ಬಹಳ ಹಿಂದುಳಿದಿದೆ. ಆದ್ದರಿಂದ ಇದಕ್ಕೆ ತೊಡಗಿಸುವ ಹಣವನ್ನು ಆ ಮಂಡಳಿಯಲ್ಲೇ ತೊಡಗಿಸಬೇಕೆನ್ನುವ ಸಲಹೆಯನ್ನು ಕೆಲವು ಸದಸ್ಯರು ಕೊಟ್ಟಿದ್ದಾರೆ. ಮಲೆನಾಡು ಪ್ರದೇಶವೂ ಹಿಂದುಳಿದಿದೆ. ಹಿಂದುಳಿದಿರುವಂಥ ಎಲ್ಲಾ ಪ್ರದೇಶವನ್ನೂ ಅಭಿವೃದ್ಧಿ ಪಡಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಆದುದರಿಂದ ಈ ದುಡ್ಡನ್ನು ಅದರಲ್ಲಿ ತೊಡಗಿಸಲು ಬರುವುದಿಲ್ಲ. ಒಂದು ಮನೆಯಲ್ಲಿ ಐದಾರು ಮಕ್ಕಳು ಇವೆ ಎಂದರೆ, ಎಲ್ಲಾ ಮಕ್ಕಳೂ ಒಂದೇ ರೀತಿ ಇರುವುದಿಲ್ಲ. ಕೆಲವು ದಷ್ಟಪುಷ್ಟವಾಗಿರುತ್ತದೆ ಮತ್ತೆ ಕೆಲವು ವೀಕ್ ಇರಬಹುದು. ಯಾರ್‍ಯಾರಿಗೆ ಯಾವ ರೀತಿಯ ಆಹಾರವನ್ನು ಕೊಡಬೇಕು ಎನ್ನುವುದನ್ನು ನೋಡಿಕೊಂಡು ಕೊಡಬೇಕು. ದಷ್ಟಪುಷ್ಟ ಮಕ್ಕಳಿಗೆ ವಿಟಾಮಿನ್ ಆಗಲೀ ಟಾನಿಕ್ ಆಗಲೀ ಕೊಡುವುದಿಲ್ಲ. ಆದರೆ ವೀಕ್ ಇರುವಂಥ ಮಕ್ಕಳಿಗೆ ವಿಟಮಿನ್ ಮತ್ತು ಟಾನಿಕನ್ನು ಕೊಡಬೇಕಾಗುತ್ತದೆ. ಆದ್ದರಿಂದ ಮಲೆನಾಡು ಅಭಿವೃದ್ಧಿ ಮಂಡಳಿಗೂ ಆದ್ಯತೆ ಕೊಡಬೇಕಾಗುತ್ತದೆ, ಹೈದರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿಗೂ ಆದ್ಯತೆ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು

ಅರ್ಥಮಾಡಿಕೊಳ್ಳುವ ಹಾಗೆ ನಾನು ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ನನ್ನ ಕ್ಷೇತ್ರದ ತಾಲ್ಲೂಕನ್ನು ಸೇರಿಸಿಲ್ಲ, ಸರಿಯಾದ ಅಂಕಿ-ಅಂಶಗಳ ಆಧಾರದ ಮೇಲೆ ತಾಲ್ಲೂಕುಗಳ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಸೇರಿಸಿಲ್ಲವೇಂದು ಹೇಳಿದಿರಿ. ನಮ್ಮ ತಾಲ್ಲೂಕನ್ನು ಸೇರಿಸದೆ ನ್ಯಾಯ ಒದಗಿಸಿಲ್ಲವೆಂದು ಹೇಳಿದರೆ ಅವರು ನನ್ನ ಬಗ್ಗೆ ನಾನು ಬಾಯಿಗೆ ಬಂದಂತೆ ಮಾತನಾಡಬೇಡಿ ಎಂದರೆ ಹೇಗೆ ಅವರ ಬಗ್ಗೆ ನನಗೆ ಬಹಳವಾಗಿ ಅಪಾರವಾದ ಗೌರವ ಇದೆ. ನಾನು ಅವರ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಿದ್ದರೆ, ನಾನು ಕ್ಷಮಾಪಣೆ ಕೇಳುತ್ತೇನೆ. ಅವರು ಹಿರಿಯ ಸದಸ್ಯರಾಗಿರಬಹುದು, ನಾವು ಕಿರಿಯ ಸದಸ್ಯರಾಗಿರಬಹುದು, ನಾವು ನ್ಯಾಯಯುತವಾಗಿ ನಡೆದುಕೊಳ್ಳುತ್ತಿದ್ದೇವೆ. ನಾವಿಲ್ಲಿ ರಾಜಕೀಯವಾಗಿ ನಡೆದುಕೊಳ್ಳುವುದಕ್ಕೆ ಬಂದಿಲ್ಲ. ನಾವು ಜನರ ಪ್ರತಿನಿಧಿಗಳಾಗಿ ಇಲ್ಲಿ ಕುಳಿತಿರತಕ್ಕವರು ದಯವಿಟ್ಟು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನಿಮ್ಮ ಮನಸ್ಸಿಗೆ ಏನಾದರೂ ನೋವಾಗಿದ್ದರೆ ಐಯಾಮ್ ವೆರಿ ಸಾರಿ. ಇನ್ನೇನಾದರೂ ನಾನು ಹೆಚ್ಚಿಗೆ ಹೇಳಬೇಕೇ? ನಾನೇನಾದರೂ ಅಂದಿದ್ದರೆ ಕ್ಷಮೆ ಕೇಳುತ್ತೇನೆ. ಮಾತನಾಡುವಾಗ ಸ್ವಲ್ಪ ಎಚ್ಚರವಿದ್ದರೆ ಚೆನ್ನಾಗಿರುತ್ತದೆ. ಉಪಾಧ್ಯಕ್ಷಿಣಿಯವರೇ, ಇಷ್ಟು ಹೇಳಿ ನಾನು ವಿವರಣೆ ಸರಿಯಾಗಿ ಕೊಟ್ಟಿದ್ದೇನೆಂಬ ಭಾವನೆ ನನಗಿದೆ. ಆದುದರಿಂದ, ಇದು ಡೆವಲಪ್‌ಮೆಂಟ್ ಬಿಲ್ ಆಗಿರುವುದರಿಂದ ಎಲ್ಲರೂ ಸೇರಿ ವಿರೋಧ ಮಾಡದೆ ಇದನ್ನು ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಂದು ಅಮೆಂಡ್‌ಮೆಂಟ್ ಸಹಾ ಮೂವ್ ಮಾಡುತ್ತಿದ್ದೇನೆ. ಈ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವಿಧೇಯಕ, 1991 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸಬಯಸುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ವಾಟಾಳ್ ನಾಗರಾಜ್‌ರವರೇ ನೀವು ಒಂದು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದೀರಿ. ಅದನ್ನು ಮಂಡಿಸುತ್ತೀರೋ ಅಥವಾ ವಾಪಸ್ಸು ತೆಗೆದುಕೊಳ್ಳುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ಮಂಡಿಸುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ಒಂದು ತಿದ್ದುಪಡಿಯನ್ನು ಮಂಡಿಸುತ್ತೇನೆ.

ಪ್ರಸ್ತಾವ ಏನೆಂದರೆ : ತಿದ್ದುಪಡಿ ವಿಧೇಯಕದ ಅನುಸೂಚಿಯಲ್ಲಿ ಒಂದನೇ ಕ್ರಮಸಂಖ್ಯೆ ಮೂರನೇ ಅಂಕಣದಲ್ಲಿ ಪಿರಿಯಾಪಟ್ಟಣ, ಹೆಗ್ಗಡೆದೇವನಕೋಟೆ, ಗುಂಡ್ಲುಪೇಟೆ ಎಂಬ ಪದಗಳ ತರುವಾಯ "ಚಾಮರಾಜನಗರ ಮತ್ತು ಕೊಳ್ಳೆಗಾಲ ಎಂಬ ಪದಗಳನ್ನು ಸೇರಿಸತಕ್ಕದ್ದು" ಇದನ್ನು ನಾನು ಮಂಡಿಸುತ್ತಾ, ಎರಡು ತಾಲ್ಲೂಕುಗಳು ಬಹಳ ಅತ್ಯಂತ ಹಿಂದುಳಿದಿರತಕ್ಕಂಥ ಮತ್ತು ಕಟ್ಟಕಡೆಯ ತಾಲ್ಲೂಕುಗಳಾಗಿರುವುದರಿಂದ ಈ ತಿದ್ದುಪಡಿಯನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

(ತಿದ್ದುಪಡಿಯನ್ನು ಮಂಡಿಸಲಾಯಿತು)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಅಮೆಂಡ್‌ಮೆಂಟ್‌ನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಏಕೆಂದರೆ, ಯಾವ್ಯಾವ ತಾಲ್ಲೂಕುಗಳು ಹಾಗೂ ಯಾವ್ಯಾವ ಡಿಸ್ಟ್ರಿಕ್‌ಗಳನ್ನು ಸೇರಿಸಬೇಕೆಂದು ಈಗಾಗಲೇ ನಾವು ಗೌರ್ನಮೆಂಟ್ ಆಫ್ ಇಂಡಿಯಾಗೆ ಬರೆದಿದ್ದೇವೆ.

ಅದು ಬಂದ ಮೇಲೆ ಯಾವುದಾದರೂ ಸೇರಿಸಬೇಕಾಗಿದ್ದರೆ ಮತ್ತೆ ಬರೆಯಬೇಕಾಗುತ್ತದೆ. ಅದನ್ನು ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ನಿವು ಇದನ್ನು ಒಪ್ಪಿಕೊಳ್ಳಲು ಆಗುವುದಿಲ್ಲವೆಂದು ಏಕಾಏಕಿ ತಿರಸ್ಕಾರ ಮಾಡಬೇಕಾದರೆ ಈ ಸಭೆಯು ಅದನ್ನು ತಿರಸ್ಕರಿಸಲಿ. ನೀವು ಏನು ಏಕಾಭಿಪ್ರಾಯವನ್ನಿಟು ಕೊಂಡಿದ್ದೀರಿ ಒಂದೇ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದೀರಿ ಅದನ್ನು ವಿರೋಧಿಸಿ ನಾನು ಧರಣಿ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಉಪಾಧ್ಯಕ್ಷಣೆಯವರೇ ಮಾನ್ಯ ಸಚಿವೆಯರು ಏನು ಹೇಳಿದ್ದಾರೆಂದರೆ ಈಗ ಯಾವ್ಯಾವ ತಾಲ್ಲೂಕುಗಳಿಗೆ ಹಿಂದೆ ಮಸೂದೆಯಲ್ಲಿ ಏನು ಇದೆ ಅದಕ್ಕೆ ನಾವು ತಿದ್ದುಪಡಿ ಮಾಡಿದ್ದೇವೆ. ಆ ತಿದ್ದುಪಡಿಯ ಪ್ರಕಾರ ಪಶ್ಚಿಮಘಟ್ಟ ಯೋಜನೆಯಲ್ಲಿ ಯಾವ ತಾಲ್ಲೂಕುಗಳನ್ನು ನಿಷ್ಕರ್ಷಿಸಿ ಕೇಂದ್ರಸರ್ಕಾರ ಒಪ್ಪಿಗೆ ಕೊಟ್ಟಿದೆಯೋ ಆ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿದ್ದೇವೆ. ಈ ಮಲೆನಾಡಿನಲ್ಲಿ ಅದಕ್ಕೆ ಇನ್ನೂ 18 ತಾಲ್ಲೂಕುಗಳನ್ನು ಅಂದರೆ ಸಚಿವೆಯರು ಹೇಳಿದಪ್ರಕಾರ ಬೀದರ್ ಜಿಲ್ಲೆಯಲ್ಲಿನವುಗಳನ್ನು ಕೂಡ ಪಶ್ಚಿಮಘಟ್ಟಕ್ಕೆ ಸೇರಿಸಿರುವಂತಹ ತಾಲ್ಲೂಕಿನ ಎಲ್ಲಾ ಸೌಲಭ್ಯವನ್ನು ಮತ್ತು ಎಲ್ಲಾ ಒಂದು ಷರತ್ತುಗಳನ್ನು ಪೂರೈಸುವುದರಿಂದ ಈ ತಾಲ್ಲೂಕನ್ನು ಸೇರಿಸಬೇಕೆಂದು ಕೇಂದ್ರಸರ್ಕಾರಕ್ಕೆ ಈವತ್ತಲ್ಲ ಸುಮಾರು 5-6 ವರ್ಷಗಳಿಂದ ಸಂಪರ್ಕ ಮಾಡುತ್ತಿದ್ದೇವೆ. ಆ ತಾಲ್ಲೂಕುಗಳನ್ನು ಕೂಡ ಇದರಲ್ಲಿ ಸೇರಿಸಿದ್ದೇವೆ. ಇನ್ನೊಂದು ಪ್ರಶ್ನೆ ? ಎಂದರೆ ತಾವು ಹೇಳಿದ ಪ್ರಕಾರ ಚಾಮರಾಜನಗರವನ್ನು ಸೇರಿಸಬೇಕೆಂದು ಈಗ ನಾವು ಕೇಂದ್ರ ಸರ್ಕಾರಕ್ಕೆ ಯಾವುದನ್ನು ಕಳಿಸಿದ್ದೆವೋ ಅದು ನಮ್ಮ ಇಚ್ಛಾನುಸಾರವಾಗಿ ಸೇರಿಸಿದಂತಹ ತಾಲ್ಲೂಕುಗಳಲ್ಲ ಕೇಂದ್ರ ಸರ್ಕಾರದ ಯಾವ ಒಂದು ಷರತ್ತುಗಳಿಗೆ ಈ ಪಶ್ಚಿಮಘಟ್ಟದಲ್ಲಿ ಆ ಮಾರ್ಗದರ್ಶನದಲ್ಲಿ ಸೇರಿಸಿದ್ದೇವೆ. ಇದರಲ್ಲಿ ಕೊಳ್ಳೇಗಾಲ ಇದೆ ತಾವು ಹೇಳಿದ ಪ್ರಕಾರ ಚಾಮರಾಜನಗರ ಕೂಡ ಈ ಕೇಂದ್ರಸರ್ಕಾರದ ಮಾರ್ಗದರ್ಶನಗಳಿಗೆ ಷರತ್ತುಗಳಿಗೆ ಒಳಪಡುತ್ತದೆಯೇ ಎನ್ನುವ ವಿಚಾರವನ್ನು ನಾವು ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿ ಅದನ್ನು ಪರಿಶೀಲನೆ ಮಾಡಿಸಿ ಚಾಮರಾಜನಗರವು ನಿಜವಾಗಿಯೂ ಆ ಷರತ್ತುಗಳನ್ನು ಪೂರೈಸತಕ್ಕಂಥ ಎಲ್ಲಾ ಪರಿಸ್ಥಿತಿಯ ವೈಶಿಷ್ಟತೆ ಇದೆ ಎಂದು ತಾವು ಹೇಳಿದ ಕಾರಣಗಳಿಂದ ಅದಕ್ಕೆ ನಾವು ಅಧಿಕಾರಿಗಳನ್ನು ಕಳಿಸಿ ವರದಿಯನ್ನು ತರಿಸಿ ಅದನ್ನು ಸೇರಿಸಲು ಎಲ್ಲಾ ಅರ್ಹತೆಗಳನ್ನು ಅದು ಹೊಂದಿದ್ದರೆ ಅದನ್ನು ಕೂಡ ನಾವು ಕೇಂದ್ರಸರ್ಕಾರ ರೆಕಮೆಂಡ್ ಮಾಡುತ್ತೇವೆ. ಆಮೇಲೆ ನಾವು ಸೂಕ್ತ ಕ್ರಮವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಹಾಗೂ ಈ ಮಲೆನಾಡು ಯೋಜನೆಯಲ್ಲಿಯೂ ಸೇರಿಸಲಾಗುತ್ತದೆ. ನಾವು ಯಾವುದನ್ನು ಪಶ್ಚಿಮಘಟ್ಟದಲ್ಲಿ ಇಲ್ಲಿಯವರೆಗೆ ಸೇರಿಸಲಿಲ್ಲ, ಯಾವ ತಾಲ್ಲೂಕುಗಳನ್ನು ಪಶ್ಚಿಮಘಟ್ಟದಲ್ಲಿ ಸೇರಿಸಲಿಕ್ಕೆ ಕೇಂದ್ರಸರ್ಕಾರಕ್ಕೆ ನಾವು ರೆಕಮೆಂಡ್ ಮಾಡಲಿಲ್ಲ, ಅಂತಹ ಯಾವುದೇ ತಾಲ್ಲೂಕುಗಳನ್ನು ಹೆಚ್ಚುವರಿ ಇಚ್ಛಾನುಸಾರವಾಗಿ ನಾವು ಸೇರಿಸಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಇಚ್ಛಾನುಸಾರವಾಗಿ ಸೇರಿಸಿದ್ದೇ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಆದುದರಿಂದ ಇದರ ಬಗ್ಗೆ ಸರಿಯಾದ ಅಧ್ಯಯನ ಮಾಡಿ ಇದರ ಬಗ್ಗೆ ಸ್ವಲ್ಪ ಸಹಾನುಭೂತಿಯಿಂದ ತಾವು ಆಲೋಚನೆ

ಮಾಡಬೇಕು. ಹೇಳಿದ ಮೇಲೆ ನಾನು ಅಧಿಕಾರಿಗಳನ್ನು ಕಳಿಸಿ ಮಾಹಿತಿಯನ್ನು ಪಡೆಯುತ್ತೇವೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಕೋಳಿ ಕೇಳಿ ಮೆಣಸನ್ನು ಅರದಹಾಗೆ ಕಾಳಮರಿಗೌಡರು ಹೆಜ್ಜೆ ಹೆಜ್ಜೆಗೂ ಎದ್ದು ನಿಂತರೆ ನಾನೇನು ಪ್ರಾಣತೆಗೆದುಕೊಳ್ಳಲೇ ಹೇಳಿ.

ಉಪಾಧ್ಯಕ್ಷಣಿಯವರು : ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಉಪಾಧ್ಯಕ್ಷಣಿಯವರು: ಏನೆಂದರೆ 1991ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಉಪಾಧ್ಯಕ್ಷಣಿಯವರು: ಮಾನ್ಯ ವಾಟಾಳ್‌ನಾಗರಾಜ್‌ರವರು ಸೂಚಿಸಿರುವ ತಿದ್ದುಪಡಿಯನ್ನೂ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ ವಿಧೇಯಕ ಅನುಸೂಚಿಯಲ್ಲಿ 1ನೇ ಕ್ರಮಸಂಖ್ಯೆಯ 3ನೇ ಅಂಕಣದಲ್ಲಿ ಪಿರಿಯಾಪಟ್ಟಣ ಹೆಗ್ಗಡದೇವನಕೋಟೆ ಗುಂಡ್ಲುಪೇಟೆ ಎಂಬ ಪದಗಳ ತರುವಾಯ ಚಾಮರಾಜನಗರ ಮತ್ತು ಕೊಳ್ಳೆಗಾಲ ಎಂಬ ಪದಗಳನ್ನು ಸೇರಿಸತಕ್ಕದ್ದು

ಉಪಾಧ್ಯಕ್ಷಣಿಯವರು : ಮಾನ್ಯ ವಾಟಾಳ್‌ನಾಗರಾಜ್‌ರವರೇ ನಿಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುತ್ತೀರಾ?

ಶ್ರೀ ವಾಟಾಳ್‌ನಾಗರಾಜ್ : ನಾನು ಧರಣಿ ಕುಳಿತುಕೊಳ್ಳುತ್ತೇನೆ. ತಿದ್ದುಪಡಿಯ ಬಗ್ಗೆ ಆಶ್ವಾಸನೆ ಬರುವವರೆಗೂ ನಾನು

(ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ಧರಣಿಗೆ ಕುಳಿತರು)

ಉಪಾಧ್ಯಕ್ಷಣಿಯವರು : ಮಾನ್ಯ ಮುಖ್ಯಮಂತ್ರಿಯವರು ಏನೋ ಹೇಳುತ್ತಿದ್ದಾರೆ

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ ಯಾವುದೇ ಪ್ರದೇಶವನ್ನು ಸೇರಿಸುವುದಕ್ಕೆ ಕೆಲವು ಸಕಾರಣಗಳು ಇರಬೇಕಾಗುತ್ತದೆ. ಮೊದಲು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರಸರ್ಕಾರದಿಂದ ನಿರೂಪಣೆ ಮಾಡಿರುವಂತಹ ಪಟ್ಟಿ ಈಗಾಗಲೇ ಇದೆ. ಮತ್ತೊಂದು ಪಟ್ಟಿಯನ್ನು ಕಳುಹಿಸತಕ್ಕದ್ದು. ನಮ್ಮ ಸರ್ಕಾರದಿಂದ ಕಳುಹಿಸಿರುವುದು ಅಲ್ಲ. ಈಗಾಗಲೇ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಿಂದ ಅದನ್ನು ರೆಡಿ ಮಾಡಿ ಅದಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಈ ಕೆಲವು ಭಾಗಗಳು ಬೆಳಗಾಂ ಜಿಲ್ಲೆ ಧಾರವಾಡ ಕೂಡ ಇವೆ. ಈ ಪಟ್ಟಿಯನ ನೋಡಿದರೆ ಇದರಲ್ಲಿ ಚಾಮರಾಜನಗರ ಏಕೆ ಸೇರಬಾರದು ಅನ್ನುವಂತಹ ಅಭಿಪ್ರಾಯ ಬರುವುದು ತಪ್ಪಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಈವತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಿಂದ ಪಟ್ಟಿ ಏನು ಹೋಗಿದೆ ಅದನ್ನು ಈ ಮಲೆನಾಡು ಅಭಿವೃದ್ಧಿಗೆ ತರಬೇಕೆಂದು ಇದೆಯಲ್ಲಾ ಆ ಒಂದು ಬೇಸಿಸ್ ಇಟ್ಟುಕೊಳ್ಳಬೇಕು ಅನ್ನುವಂತಹ ದೃಷ್ಟಿಯಿಂದ ನಾವು ಮಾಡಿರುವಂತಹದ್ದು. ಈಗ ತಮ್ಮ ತಾಲ್ಲೂಕು ಸೇರದೇ ಇದ್ದಿದ್ದರೆ ಅದು ನಮ್ಮ ಕಾಲದಲ್ಲಿ ಮಾಡಿರುವಂತಹದ್ದಲ್ಲ ಈಗ ನಮ್ಮ ಕಾಲದಲ್ಲಿ ಸರಿ ಮಾಡಿ ಎಂದು ತಾವು ಹೇಳಬಹುದು. ನಮಗೆ ಉಳಿದಿರತಕ್ಕಂಥ ಒಂದು ದಾರಿ ಅವರು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ

ಆಡಿಯಲ್ಲೆ ಏನು ಕಾರಣ ಇರಬೇಕೆಂದು ಕೆಲವು ಕಾರಣಗಳನ್ನು ಇಟ್ಟುಕೊಂಡಿದ್ದಾರೆ, ಅದರ ಪ್ರಕಾರ ನಾವು ವಿಚಾರ ಮಾಡುತನೆ. ಕೇಂದ್ರ ಸರ್ಕಾರದವರಿಗೆ ಪತ್ರ ಬರೆಯುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುತ್ತಿಲ್ಲ. ನಾವು ಪತ್ರ ಬರೆಯುವುದಕ್ಕೆ ಸಾಧ್ಯವಿದೆ. ಒಂದು ತಾಲ್ಲೂಕನ್ನೂ ಸೇರಿಸಿದರೆ ಪ್ರಪಂಚವೇನೂ ಮುಳುಗಿ ಹೋಗಲ್ಲ. ಈಗ ನಾವು ಏನು ಆ ಲಿಸ್ಟನ್ನು ಒಂದು ಬೇಸಿಸ್ ಮಾಡಿದ್ದೇವೆ. ಅದಕ್ಕೆ ಇದನ್ನೂ ಕೂಡ ಸೇರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಮತ್ತೆ ಬರೆಯಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಆ ವಿವರಗಳು ಏನು ಎನ್ನತಕ್ಕದ್ದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರ ಏನು ಮಾರ್ಗಸೂಚಿಗಳು ಇವೆ ಅದರ ಪ್ರಕಾರ ಅವರಿಗೂ ಕೂಡ ಪತ್ರ ಬರೆಯೋಣ ನಾನು ಬೇಡವೆಂದು ಹೇಳುತ್ತಿಲ್ಲ. ನಿಮ್ಮ ತಾಲ್ಲೂಕು ಅಭಿವೃದ್ಧಿಯಾದರೆ ನಾವು ಏತಕ್ಕೆ ಬೇಡ ಎಂದು ಹೇಳೋಣ. ಹಣ ಸೇರುವಂತದರಲ್ಲಿ ಈಗ 10 ರೂಪಾಯಿ ಇದ್ದರೆ ಅದನ್ನು ಆರು ತಾಲ್ಲೂಕುಗಳಿಗೆ ಖರ್ಚು ಮಾಡುತ್ತೇವೆ. ಈಗ ಇನ್ನೊಂದು ತಾಲ್ಲೂಕು ಸೇರಿಕೊಳ್ಳುತ್ತದೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಇರುವ ಹಣವನ್ನೇ ನಾವು ಹಂಚಿಕೊಳ್ಳಬೇಕಾಗುತ್ತದೆ. ಇದು ಒಂದೇ ದಾರಿ ನಮಗೆ ಉಳಿದಿರುವಂತಹದ್ದು ಆದುದರಿಂದ ನಾವು ಈ ವಿಚಾರದಲ್ಲಿ ಕೇಂದ್ರಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಇಂದು ಚಾಮರಾಜನಗರ ಒಂದೇ ಅಲ್ಲ ನಾಳೆ ಮತ್ತೊಂದು ತಾಲ್ಲೂಕು ಬರಬಹುದು. ಆದುದರಿಂದ ಕೇಂದ್ರಸರ್ಕಾರಕ್ಕೆ ಬರೆಯೋಣ. ಬರೆದ ಮೇಲೆ ಅದು ಒಂದು ಗ್ರೌಂಡ್ ಆಗುವುದಕ್ಕೆ ಸಾಧ್ಯವಾಗುತ್ತದೆಯೆಂಬ ದೃಷ್ಟಿಯಿಂದ ಹೇಳಿದ್ದೇವೆ ತಮ್ಮ ತಿದ್ದುಪಡಿಯ ಪ್ರಶ್ನೆ ಇದೆಯಲ್ಲಾ ಅದನ್ನು ನಾವು ಇವತ್ತು ಬಹುಮತದ ಆಧಾರದಮೇಲೆ ಕೆಡವಿಬಿಡಬಹುದು ಅನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. That is not my point. ಹಾಗಲ್ಲ ಇವತ್ತು ಕರ್ನಾಟಕ ರಾಜ್ಯದ ಎಲ್ಲಾ ಭಾಗಗಳೂ ಅಭಿವೃದ್ಧಿ ಆಗಬೇಕೆಂಬ ದೃಷ್ಟಿ ನಮಗೆ ಇರುವುದರಿಂದ ನಾನು ಈ ಮಾತನ್ನು ಒಂದು ಒಳ್ಳೆಯ ಭಾವನೆಯಿಂದ ಹೇಳುತ್ತಿದ್ದೇನೆ. ನಮ್ಮ ಅಧಿಕಾರಿಗಳನ್ನು ನಾವು ಕಳುಹಿಸಿಕೊಡುತ್ತೇವೆ. ನಮ್ಮ ಮಾನ್ಯ ಸಂಸದೀಯ ಸಚಿವರೂ ಸಹ ತಿಳಿಸಿದ್ದಾರೆ ಅದರ ಪ್ರಕಾರ ಏನು ಕಾರಣ ಎನ್ನುವುದನ್ನು ನೋಡಿ ಅಧಿಕಾರಿಗಳನ್ನು ಕಳಿಸಿ ವಿವರಗಳನ್ನು ತರಿಸಿಕೊಂಡು ಕೇಂದ್ರಸರ್ಕಾರಕ್ಕೂ ಬರೆಯುತ್ತೇವೆಂಬುದು ಒಂದೇ ದಾರಿ ನಮಗೆ ಉಳಿದಿರತಕ್ಕದ್ದು ತಯವಿಟ್ಟು ತಾವು ಅದರ ಬಗ್ಗೆ ವಿಚಾರ ಮಾಡಿ. ಈಗ ಈ ಒಂದು ಭರವಸೆ ಏನು ಕೊಟ್ಟಿದ್ದೇವೆ ಇದರ ಮೇಲೆ ನಾವು ಆಕ್ಟ್ ಮಾಡುತ್ತೇವೆ. ಅಧಿಕಾರಿಗಳನ್ನು ತಮ್ಮ ತಾಲ್ಲೂಕಿಗೆ ಕಳುಹಿಸಿಕೊಡುತ್ತೇನೆ. ಆದುದರಿಂದ ತಮ್ಮ ತಿದ್ದುಪಡಿಯನ್ನು ಈಗ ಒತ್ತಾಯ ಮಾಡುವುದು. ಬೇಡ ಒಂದು ವೇಳೆ ತಿದ್ದುಪಡಿಯನ್ನು ತರಬೇಕೆಂದರೆ ಮತ್ತೆ ಮುಂದಿನ ಅಧಿವೇಶನದಲ್ಲಿ ತರತಕ್ಕ ಹಕ್ಕು ತಮಗೆ ಇದ್ದೇ ಇರುತ್ತದೆ ಅದು ಬಂದು ಹೋಗತಕ್ಕದ್ದು ಗೆದ್ದು ಹೋಗತಕ್ಕದ್ದು ಪ್ರಶ್ನೆ ಬೇರೆ. ಧರಣಿಯನ್ನು ಮಾಡಬೇಕೆಂಬ ವಿಚಾರ ಬಂದರೆ ಆ ಸಂದರ್ಭ ಇದ್ದೇ ಇರುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ತಾವು ತಮ್ಮ ಸ್ಥಾನಕ್ಕೆ ಹೋಗಿ. ಈ ನನ್ನ ಭರವಸೆಯ ಮೇಲೆ ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನಗೆ ಬೇರೆ ದಾರಿ ಇಲ್ಲ.

ಉಪಾಧ್ಯಕ್ಷಿಣಿಯವರು : ಮಾನ್ಯ ಸದಸ್ಯರು ಈ ತಿದ್ದುಪಡಿಯನ್ನು ಒತ್ತಾಯ ಮಾಡುವುದಿಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಇಲ್ಲಾ, ನಾನು ಒತ್ತಾಯ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಕೊಟ್ಟಿರತಕ್ಕ ಭರವಸೆಯ ಮೇಲೆ ನನಗೆ ನಂಬಿಕೆ ಇದೆ. ಧರಣೆಯನ್ನು ಮಾಡಬೇಕೆಂಬ ಯಾವುದೇ ಉದ್ದೇಶವೂ ಇರಲಿಲ್ಲ. ನಿಜಾವಾಗಿಯೂ ಆ ತಾಲ್ಲೂಕು ನಿಜವಾಗಿ ಅತ್ಯಂತ ಹಿಂದುಳಿದಿರತಕ್ಕ ತಾಲ್ಲೂಕು ನಾನು ಮೊದಲಿನಿಂದಲೂ ನೋಡುತ್ತಿದ್ದೇನೆ. ಕೊಳ್ಳೇಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳು ಏನಿದೆ ಅಲ್ಲಿರತಕ್ಕ ಉಪ್ಪಲೆ ಜನಾಂಗ ಮೇಲುಸಕ್ಕರೆ ಸೆಟ್ಟರು ಇವರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಾನು ನೋಡಿರುವುದರಿಂದ ತಮಗೆ ಹೇಳುತ್ತಿದ್ದೇನೆ.

ಶ್ರೀ ಕೆ. ಸಿದ್ದಯ್ಯ : ಕೊಳ್ಳೇಗಾಲ ಇದೆ.

ಶ್ರೀ ವಾಟಾಳ್ ನಾಗರಾಜ್ : ಗುಂಡ್ಲುಪೇಟೆ ಇದೆ ಕೊಳ್ಳೇಗಾಲ ಇದೆ. ಈ ಎರಡೂ ಕೂಡ ಒಂದೇ ಬೆಟ್ಟದ ಸಾಲಿನಲ್ಲಿ ಬರುತ್ತದೆ. ಅಂದಮೇಲೆ ಈ ಚಾಮರಾಜನಗರವನ್ನು ಬಿಟ್ಟ ಉದ್ದೇಶವಾದರೂ ಏನು? ಮಾನ್ಯ ಉಪಾಧ್ಯಕ್ಷಿಣಿಯವರೇ ಮಾನ್ಯ ಮುಖ್ಯ ಮಂತ್ರಿಗಳ ಮಾತಿನ ಮೇಲೆ ನಾನು ಭರವಸೆಯನ್ನು ಇಟ್ಟಿದ್ದೇನೆ. ಆದುದರಿಂದ ನನ್ನ ಈ ತಿದ್ದುಪಡಿಯನ್ನು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Madam Dy speaker : Is it the pleasure of the House to grant permision to sri Vatal Nagaraj to withdraw his amendment, permission was granted (ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಲು ಸಭೆಯು ಅನುಮತಿ ನೀಡಿತು.)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ - 2

ಉಪಾಧ್ಯಕ್ಷಿಣಿಯವರು: ಪ್ರಸ್ತಾಪ ಏನೆಂದರೆ '

ಖಂಡ - 2 ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀರಿಸಲ್ಪಟ್ಟಿತು

ಹಾಗೂ ಖಂಡ 2 ವಿಧೇಯಕದ ಅಂಗವಾಯಿತು

ಖಂಡ - 3ಕ್ಕೆ ತಿದ್ದುಪಡಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಖಂಡ (3)ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತೇನೆ:

ಪ್ರಸ್ತಾವ ಏನೆಂದರೆ:

"3ನೇ ಖಂಡದಲ್ಲಿ (3) ನೇ ಉಪಖಂಡದಲ್ಲಿ (ಡಿ) ಬಾಬಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು:

"(ಇ) ಮಲೆನಾಡು ಪ್ರದೇಶದಲ್ಲಿಯ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರ್

ಉಪಾಧ್ಯಕ್ಷಿಣಿಯವರು :

ಪ್ರಸ್ತಾವ ಏನೆಂದರೆ:

"3ನೇ ಖಂಡದಲ್ಲಿ (3) ನೇ ಉಪಖಂಡದಲ್ಲಿ (ಡಿ) ಬಾಬಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು:

"(ಇ) ಮಲೆನಾಡು ಪ್ರದೇಶದಲ್ಲಿಯ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮಿಷನರ್"

ಪ್ರಸ್ಥಾವ ಅಂಗೀಕರಿಸಲ್ಪಟ್ಟಿತು

ತಿದ್ದುಪಡಿಯು ಖಂಡ 3ಕ್ಕೆ ಸೇರಿಸಲ್ಪಟ್ಟಿತು

ಖಂಡ - 3 ತಿದ್ದುಪಡಿಯಾದ ರೀತಿಯಲ್ಲಿ ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ:

ಖಂಡ -3 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ (ಖಂಡ -3 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ರಿಂದ 9ರ ವರೆಗೆ ಎರಡೂ ಸೇರಿದಂತೆ

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ:

ಖಂಡ 4ರಿಂದ 9ರ ವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4ರಿಂದ 9ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 10ಕ್ಕೆ ತಿದ್ದುಪಡಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ಖಂಡ 10ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:

10ನೇ ಖಂಡದಲ್ಲಿ

1. (1) (ಸಿ) ಯಿಂದ (ಎನ್) ವರೆಗಿನ ಬಾಬುಗಳಿಗೆ ಅನುಕ್ರಮವಾಗಿ (ಡಿ) ಯಿಂದ (ಒ) ವರೆಗಿನ ಬಾಬುಗಳೆಂದು ಮರುಸಂಖ್ಯೆ ನೀಡತಕ್ಕುದು ಮತ್ತು (11) ಹಾಗೆ ಮರುಸಂಖ್ಯೆ ನೀಡಲಾದ (ಡಿ) ಬಾಬಿಗೆ ಮುಂಚೆ ಈ ಮುಂದಿನದನ್ನು ಸೇರಿಸತಕ್ಕುದು ಎಂದರೆ "(ಸಿ) ಮಲೆನಾಡು ಪ್ರದೇಶದಲ್ಲಿಯ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮಿಷನರು"
2. "(ಎಂ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 1976ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯ ರಾಜ್ಯ ಸರ್ಕಾರದಿಂದ ನಾನು ನಿರ್ದೇಶಿತನಾದ ಕುಲಪತಿ"

ಉಪಾಧ್ಯಕ್ಷಣಿಯವರು : ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ

10 ನೇ ಖಂಡದಲ್ಲಿ

1 (1)(ಸಿ) ಯಿಂದ (ಎನ್) ವರೆಗಿನ ಬಾಬುಗಳಿಗೆ ಅನುಕ್ರಮವಾಗಿ (ಡಿ) ಯಿಂದ (ಒ) ವರೆಗಿನ ಬಾಬುಗಳೆಂದು ಮರುಸಂಖ್ಯೆ ನೀಡತಕ್ಕುದು ಮತ್ತು (11) ಹಾಗೆ ಮರುಸಂಖ್ಯೆ ನೀಡಲಾದ (ಡಿ) ಬಾಬಿಗೆ ಮುಂಚೆ ಈ ಮುಂದಿನದನ್ನು ಸೇರಿಸಕ್ಕುದು ಎಂದರೆ "(ಸಿ) ಮಲೆನಾಡು ಪ್ರದೇಶದಲ್ಲಿಯ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮಿಷನರು"

2. "(ಎಂ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ, 1976ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾದ ಕುಲಪತಿ"

ಪ್ರಸ್ತಾವ ಅಂಗೀಕರಿಸ್ಪಟ್ಟಿತ್ತು

ತಿದ್ದುಪಡಿಯನ್ನು ಖಂಡ 10ಕ್ಕೆ ಸೇರಿಸಲ್ಪಟ್ಟಿತು.

ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ

ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷಣಿಯವರು : ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮಂಡಿಸಿದ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಲು ಸಭೆಯು ಈಗಾಗಲೇ ಅನುಮತಿ ನೀಡಿರುವುದರಿಂದ ಈಗ ಖಂಡ 1 ಇತ್ಯಾದಿಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ: ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧೀಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ವಿಧೇಯಕದ ಅನುಸೂಚಿಗೆ ತಿದ್ದುಪಡಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಈ ವಿಧೇಯಕದ ಅನುಸೂಜಿಗೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಕ್ರ ಸಂ.	ಜಿಲ್ಲೆಗಳು	ತಾಲ್ಲೂಕುಗಳು
1	ಬೆಳಗಾವಿ	ಖಾನಾಪುರ, ಹುಕ್ಕೇರಿ, ಬೆಳಗಾವಿ, ಬೈಲಹೊಂಗಲ, ಸವದತ್ತಿ
2	ಚಿಕ್ಕಮಗಳೂರು	ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು, ಎನ್.ಆರ್. ಪುರ, ತರೀಕೆರೆ

3	ಕೊಡಗು	ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ
4	ಹಾಸನ	ಸಕಲೇಶಪುರ, ಆಲೂರು, ಬೇಲೂರು, ಹಾಸನ, ಅರಕಲಗೂಡು
5	ಮೈಸೂರು	ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹುಣಸೂರು, ಕೊಳ್ಳೇಗಾಲ
6	ಉತ್ತರ ಕನ್ನಡ	ಅಂಕೋಲ, ಭಟ್ಕಳ, ಹೊನ್ನಾವರ, ಕುಮಟಾ, ಕಾರವಾರ ಸಿದ್ದಾಪುರ, ಸಿರಸಿ, ಸೂಪ, ಯಲ್ಲಾಪುರ ಹಳಿಯಾಳ, ಮುಂಡುಗೋಡ.
7	ದಕ್ಷಿಣ ಕನ್ನಡ	ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಪುತ್ತೂರು, ಸುಳ್ಯಾ, ಉಡುಪಿ, ಮಂಗಳೂರು, ಬಂಟ್ವಾಳ.
8	ಶಿವಮೊಗ್ಗ	ಹೊಸನಗರ ತೀರ್ಥಹಳ್ಳಿ, ಸಾಗರ, ಶಿವಮೊಗ್ಗ, ಶಿಕಾರಿಪುರ, ಸೊರಬ, ಚನ್ನಗಿರಿ ಭದ್ರಾವತಿ.
9	ಧಾರವಾಡ	ಧಾರವಾಡ, ಕಲಘಟಗಿ, ಶಿಗ್ಗಾವಿ, ಸವಣೂರು, ಹಾನಗಲ್, ಬ್ಯಾಡಗಿ, ಹಿರೆಕರೂರು.

ಉಪಾಧ್ಯಕ್ಷಣಿಯವರು: ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ ಪ್ರಸ್ತಾವ ಏನೆಂದರೆ

ಕ್ರ ಸಂ.	*ಜಿಲ್ಲೆಗಳು*	*ತಾಲ್ಲೂಕುಗಳು*
1	ಬೆಳಗಾವಿ	ಖಾನಾಪುರ, ಹುಕ್ಕೇರಿ, ಬೆಳಗಾವಿ, ಬೈಲಹೊಂಗಲ, ಸವದತ್ತಿ
2	ಚಿಕ್ಕಮಗಳೂರು	ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು, ಎನ್.ಆರ್. ಪುರ, ತರೀಕೆರೆ
3	ಕೊಡಗು	ಮಡಿಕೇರಿ, ಸೋಮವಾರಪೇಟೆ, ವೀರಾಜಪೇಟೆ
4	ಹಾಸನ	ಸಕಲೇಶಪುರ, ಆಲೂರು, ಬೇಲೂರು, ಹಾಸನ, ಅರಕಲಗೂಡು
5	ಮೈಸೂರು	ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹುಣಸೂರು, ಕೊಳ್ಳೇಗಾಲ
6	ಉತ್ತರ ಕನ್ನಡ	ಅಂಕೋಲ, ಭಟ್ಕಳ, ಹೊನ್ನಾವರ, ಕುಮಟಾ, ಕಾರವಾರ ಸಿದ್ದಾಪುರ, ಸಿರಸಿ, ಸೂಪ, ಯಲ್ಲಾಪುರ ಹಳಿಯಾಳ, ಮುಂಡುಗೋಡ.
7	ದಕ್ಷಿಣ ಕನ್ನಡ	ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಪುತ್ತೂರು, ಸುಳ್ಯಾ, ಉಡುಪಿ, ಮಂಗಳೂರು, ಬಂಟ್ವಾಳ.
8	ಶಿವಮೊಗ್ಗ	ಹೊಸನಗರ ತೀರ್ಥಹಳ್ಳಿ, ಸಾಗರ, ಶಿವಮೊಗ್ಗ, ಶಿಕಾರಿಪುರ, ಸೊರಬ, ಚನ್ನಗಿರಿ ಭದ್ರಾವತಿ.
9	ಧಾರವಾಡ	ಧಾರವಾಡ, ಕಲಘಟಗಿ, ಶಿಗ್ಗಾವಿ, ಸವಣೂರು, ಹಾನಗಲ್, ಬ್ಯಾಡಗಿ, ಹಿರೆಕರೂರು.